# ಕನ್ನಡ ಪೋಸ್ಟ್

KANNADA POST

ಇದು ಸುದ್ದಿ ವಿಲಾಸ

ಸಂಪಾದಕ : ಮಂಜು ಬನವಾಸೆ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 113 | Pages. 2 | Date: 05-04-2026, SUNDAY | RNI NO: KARKAN/2024/89601 | Kannada Daily

ಸಂಪುಟ : 02 – ಸಂಚಿಕೆ : 113 – ಪುಟಗಳು : 2 | 05-04-2026 | ಭಾನುವಾರ | Ph: 8762954248 | ದರ : ₹1


# ಸಾರ್ವತ್ರಿಕ ಜನಗಣತಿಯಲ್ಲಿ ಎಲ್ಲರೂ ಪಾಲ್ಗೊಳ್ಳಿ

## ಜಿಲ್ಲಾಧಿಕಾರಿ ಲತಾಕುಮಾರಿ ಮನವಿ | ಮೊಬೈಲ್‌ನಲ್ಲೇ ಮಾಹಿತಿ ಸಲ್ಲಿಸಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**

ಹಾಸನ: ದೇಶದ ಆಡಳಿತ ವ್ಯವಸ್ಥೆಯಲ್ಲಿ ಮಹತ್ವ ಮತ್ತು ಮೂಲಭೂತ ಚಟುವಟಿಕೆಗಳಲ್ಲಿ ಒಂದಾದ ಜನಗಣತಿ ದೇಶಾದ್ಯಂತ ಶುರುವಾಗಿದ್ದು, ಜಿಲ್ಲೆಯ ಪ್ರತಿಯೊಬ್ಬರೂ ಸ್ವಯಂ ಗಣತಿಯಲ್ಲಿ ಭಾಗಿಯಾಗಬೇಕು ಎಂದು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಮನವಿ ಮಾಡಿದರು.

ಸುದ್ದಿಗೋಷ್ಟಿಯಲ್ಲಿ ಶನಿವಾರ ಮಾತನಾಡಿದ ಅವರು, ಜನಸಂಖ್ಯೆ, ಜನರ ಜೀವನಮಟ್ಟ, ವಾಸಸ್ಥಿತಿ, ಶಿಕ್ಷಣ, ಉದ್ಯೋಗ ಸೇರಿದಂತೆ ಹಲವು ಪ್ರಮುಖ ಅಂಶಗಳ ಬಗ್ಗೆ ನಿಖರ ಮಾಹಿತಿ ಒದಗಿಸುವ ಕಾರ್ಯ ಇದು. ಸರ್ಕಾರದ ಅಭಿವೃದ್ಧಿ ಯೋಜನೆಗಳಿಗೆ ದಿಕ್ಕು ತೋರಿಸುವ ಪ್ರಮುಖ ಆಧಾರವಾಗಿದೆ ಎಂದು ಹೇಳಿದರು.

2027ರ ಜನಗಣತಿ, ಹಿಂದಿನ ಎಲ್ಲಾ ಗಣತಿಗಿಂತ ವಿಭಿನ್ನವಾಗಿದ್ದು, ಡಿಜಿಟಲ್ ತಂತ್ರಜ್ಞಾನ ಮತ್ತು ಆಧುನಿಕ ವ್ಯವಸ್ಥೆಗಳೊಂದಿಗೆ ಎರಡು ಹಂತಗಳಲ್ಲಿ ನಡೆಯಲಿದೆ. ಏ.15 ರಿಂದ ಮೇ 15ರ ವರೆಗೆ ಮನೆ ಪಟ್ಟಿ ಮತ್ತು ಮನೆ ಗಣತಿ ನಡೆಯಲಿದೆ. 2ನೇ ಹಂತದಲ್ಲಿ ಜನಸಂಖ್ಯಾ ಗಣತಿ ನಡೆಯಲಿದ್ದು, ಒಟ್ಟು 34 ಪ್ರಶ್ನೆಗಳಿದ್ದು, ಜನಸಂಖ್ಯಾ ಗಣತಿಯು ಪ್ರತಿಯೊಬ್ಬ ವ್ಯಕ್ತಿಯ ವೈಯಕ್ತಿಕ ವಿವರಗಳನ್ನು ನಿಗದಿತ ಉಲ್ಲೇಖಿತ ದಿನಾಂಕ ಮತ್ತು ಸಮಯದಲ್ಲಿ ನಡೆಯಲಿದೆ ಎಂದರು.

ಸ್ವಯಂ ಗಣತಿ 10–15 ನಿಮಿಷದಲ್ಲಿ ಮುಗಿಯಲಿದೆ. ಇದನ್ನು 2027 ರಲ್ಲಿ ಮೊದಲ ಬಾರಿಗೆ ಜನಗಣತಿಯಲ್ಲಿ ಪರಿಚಯಿಸಲಾಗುತ್ತಿದೆ. ಇದು ಮನೆ ಪಟ್ಟಿ ಕಾರ್ಯಾಚರಣೆಗಳ



ವಿವರಗಳನ್ನು ಸ್ಪಷ್ಟವಾಗಿ ದಾಖಲು ಮಾಡಲಾಗುತ್ತದೆ. ಹಾಸನ ಜಿಲ್ಲೆ ಸೇರಿದಂತೆ ಕರ್ನಾಟಕದಲ್ಲಿ ಏ.1 ರಿಂದ 15ರ ವರೆಗೆ ಸ್ವಯಂ ಗಣತಿ ಹಮ್ಮಿಕೊಳ್ಳಲಾಗಿದೆ ಎಂದು ವಿವರಿಸಿದರು.

ಈ ಬಾರಿಯ ಜನಗಣತಿಯ ಅತ್ಯಂತ ವೈಶಿಷ್ಟ್ಯವೆಂದರೆ ಸ್ವಯಂ-ಗಣತಿ ವ್ಯವಸ್ಥೆಯಿಂದ ಜನರು ತಮ್ಮ ಮನೆಯ ಮಾಹಿತಿಯನ್ನು ಸ್ವತಃ ಆನ್‌ಲೈನ್ ಮೂಲಕ ನಮೂದಿಸಬಹುದು. ಸಾರ್ವಜನಿಕರು ತಮ್ಮ ಮೊಬೈಲ್ ಸಂಖ್ಯೆ ಮತ್ತು ಓಟಿಪಿ ಬಳಸಿ ಲಾಗಿನ್ ಆಗಿ, ಮನೆಯ ಸ್ಥಳವನ್ನು ಡಿಜಿಟಲ್ ಮ್ಯಾಪ್‌ನಲ್ಲಿ ಗುರುತಿಸಿ, ಕುಟುಂಬದ ಸಂಪೂರ್ಣ ಮಾಹಿತಿ ಭರ್ತಿ ಮಾಡಬಹುದು. ಮಾಹಿತಿ ಸಲ್ಲಿಸಿದ ನಂತರ ಅವರಿಗೆ ಎಸ್‌ಇ ಐಡಿ ನೀಡಲಾಗುತ್ತದೆ.

### ಜನ ಗಣತಿಗೆ ಜಿಲ್ಲಾದ್ಯಂತ 4,271 ಬ್ಲಾಕ್

ಜಿಲ್ಲೆಯಲ್ಲಿ ಜನಗಣತಿ ಕಾರ್ಯವನ್ನು ಯಶಸ್ವಿಯಾಗಿ ನಡೆಸಲು ವ್ಯಾಪಕ ಸಿದ್ಧತೆ ಕೈಗೊಳ್ಳಲಾಗಿದೆ. ಜಿಲ್ಲೆಯಾದ್ಯಂತ 4,271 ಗಣತಿ ಬ್ಲಾಕ್ ರಚಿಸಲಾಗಿದ್ದು, 3,969 ಗಣತಿದಾರರು ಮತ್ತು 734 ಮೇಲ್ವಿಚಾರಕರು ಕಾರ್ಯನಿರ್ವಹಿಸಲಿದ್ದಾರೆ. ಜಿಲ್ಲಾ, ತಾಲ್ಲೂಕು ಮತ್ತು ಸ್ಥಳೀಯ ಮಟ್ಟದಲ್ಲಿ ಅಧಿಕಾರಿಗಳನ್ನು ಚಾರ್ಜ್ ಅಧಿಕಾರಿಗಳಾಗಿ ನೇಮಿಸಲಾಗಿದ್ದು, ಗ್ರಾಮ ಹಾಗೂ ನಗರ ಪ್ರದೇಶಗಳ ಗಡಿಗಳನ್ನು ಗುರುತಿಸಿ ಗಣತಿ ಬ್ಲಾಕ್‌ಗಳನ್ನು ರಚಿಸಲಾಗಿದೆ ಎಂದು ವಿವರಿಸಿದರು.

ಇದನ್ನು ಗಣತಿದಾರರಿಗೆ ನೀಡುವ ಮೂಲಕ ಮಾಹಿತಿ ದೃಢೀಕರಣ ಮಾಡಬಹುದು ಎಂದರು.

ಮೊಬೈಲ್ ಅಪ್ಲಿಕೇಶನ್ ಡಿಜಿಟಲ್ ವ್ಯವಸ್ಥೆಯಿಂದ ಮಾಹಿತಿ ಸಂಗ್ರಹಣೆ ವೇಗವಾಗಿ ನಡೆಯುವುದರ ಜೊತೆಗೆ ತಪ್ಪುಗಳ ಸಾಧ್ಯತೆ ಕಡಿಮೆಯಾಗುತ್ತದೆ. ಡೇಟಾ ಸುರಕ್ಷತೆ ಮತ್ತು ಗೌಪ್ಯತೆಗೂ ಹೆಚ್ಚಿನ ಮಹತ್ವ ನೀಡಲಾಗಿದೆ ಎಂದು ತಿಳಿಸಿದರು.

ಜನಗಣತಿ ಕಾರ್ಯದಲ್ಲಿ ತೊಡಗಿರುವ ಅಧಿಕಾರಿಗಳಿಗೆ ಮೈಸೂರಿನ ಆಡಳಿತ ತರಬೇತಿ ಸಂಸ್ಥೆಯಲ್ಲಿ ಮಾಸ್ಟರ್ ಟ್ರೈನರ್‌ಗಳಿಗೆ ತರಬೇತಿ ನೀಡಲಾಗಿದ್ದು, ಜಿಲ್ಲಾ ಮಟ್ಟದಲ್ಲಿ ಫೀಲ್ಡ್ ಟ್ರೈನರ್‌ಗಳಿಗೆ ತರಬೇತಿ ಹಮ್ಮಿಕೊಳ್ಳಲಾಗಿದೆ. ಇದರ ಜೊತೆಗೆ ಗಣತಿದಾರರು ಮತ್ತು ಮೇಲ್ವಿಚಾರಕರಿಗೆ ವಿಶೇಷ ತರಬೇತಿ ನೀಡುವ ಯೋಜನೆ ರೂಪಿಸಲಾಗಿದೆ ಎಂದು ಮಾಹಿತಿ ನೀಡಿದರು.

ಸಮಯ ಉಳಿತಾಯ, ನಿಖರ ಮಾಹಿತಿ ನೀಡುವ ಅವಕಾಶ, ವೇಗವಾದ ಡೇಟಾ ಸಂಸ್ಕರಣೆ, ಡಿಜಿಟಲ್ ಮತ್ತು ಸುರಕ್ಷಿತ ಪ್ರಕ್ರಿಯೆ, ಸರಳ ಮತ್ತು ಬಳಕೆದಾರ ಸ್ನೇಹಿ ವಿಧಾನ. ಯಾವುದೇ ಕಾರಣದಿಂದ ಸ್ವಯಂ-ಗಣತಿ ಮಾಡಲು ಸಾಧ್ಯವಾಗದಿದ್ದರೂ ಜನರು ಚಿಂತಿಸಬೇಕಾಗಿಲ್ಲ, ನಿಗದಿತ ಅವಧಿಯಲ್ಲಿ ಗಣತಿದಾರರು ಮನೆಗೆ ಭೇಟಿ ನೀಡಿ, ಎಲ್ಲಾ ಮಾಹಿತಿ ಸಂಗ್ರಹಿಸುತ್ತಾರೆ. ಜನಗಣತಿಯಲ್ಲಿ ನೀಡುವ ಮಾಹಿತಿಯನ್ನು ಸಂಪೂರ್ಣ ಗೌಪ್ಯವಾಗಿರಿಸಲಾಗುತ್ತದೆ. ಈ ಮಾಹಿತಿ ಕೇವಲ ಸರ್ಕಾರದ ಯೋಜನೆಗಳ ರೂಪಿಕರಣಕ್ಕೆ ಮಾತ್ರ ಬಳಸಲಾಗುತ್ತದೆ ಮತ್ತು ಯಾವುದೇ ವ್ಯಕ್ತಿಗತ ಉದ್ದೇಶಗಳಿಗೆ ಬಳಸುವುದಿಲ್ಲ ಎಂದು ಸ್ಪಷ್ಟಪಡಿಸಿದರು. ಇದು ದೇಶದ ಅಭಿವೃದ್ಧಿಯ ಹಾದಿಯನ್ನು ನಿರ್ಧರಿಸುವ ಮಹತ್ವದ ಕಾರ್ಯವಾಗಿದ್ದು, ಪ್ರತಿಯೊಬ್ಬ ನಾಗರಿಕರೂ ಇದರ ಭಾಗವಾಗುವುದು ಅವರ ಜವಾಬ್ದಾರಿ ಎಂದ ಅವರು, ನಮ್ಮ ಜನಗಣತಿ, ನಮ್ಮ ಅಭಿವೃದ್ಧಿ, ನನ್ನ ಗಣತಿ, ದೇಶದ ಶಕ್ತಿ. ಜನರು ಉತ್ಸಾಹದಿಂದ ಪಾಲ್ಗೊಂಡರೆ ಮಾತ್ರ ಜನಗಣತಿ ಯಶಸ್ವಿಯಾಗುತ್ತದೆ. ಆದ್ದರಿಂದ ಪ್ರತಿಯೊಬ್ಬರೂ ತಮ್ಮ ಮಾಹಿತಿಯನ್ನು ನಿಖರವಾಗಿ ನೀಡಿ, ದೇಶದ ಅಭಿವೃದ್ಧಿಗೆ ಕೈಜೋಡಿಸಬೇಕು ಎಂದು ಕರೆ ನೀಡಿದರು. ಅಪರ ಜಿಲ್ಲಾಧಿಕಾರಿ ಜಗದೀಶ್ ವಿ. ಗಂಗಣ್ಣನವರ್ ಇದ್ದರು.

# ಸಿಗದ ಗ್ಯಾಸ್: ಆಟೋ ಚಾಲಕರ ಪ್ರತಿಭಟನೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**

ಹಾಸನ: ಆಟೋ ಗ್ಯಾಸ್ ಅಭಾವ ಹಾಗೂ ದರ ಏರಿಕೆ ಖಂಡಿಸಿ ಆಟೋ ಚಾಲಕರು ಶನಿವಾರ ನಗರದ ಹೇಮಾವತಿ ಪ್ರತಿಮೆ ಬಳಿ ಪ್ರತಿಭಟನೆ ನಡೆಸಿದರು.

ಆಟೋ ಚಾಲಕ ಕಿರಣ್ ಮಾತನಾಡಿ, ಇಸ್ರೇಲ್ ಯುದ್ಧದ ನಡುವೆ ಆಟೋ ಗ್ಯಾಸ್ ಸಮಸ್ಯೆ ಉಂಟಾಗಿ ಆಟೋ ಚಾಲಕರ ಪಾಡು ಹೇಳತೀರದಾಗಿದೆ. ಆಟೋಗಳನ್ನೇ ನಂಬಿಕೊಂಡು ಬದುಕುತ್ತಿರುವ ನಮ್ಮ ಜೀವನ ಮೂರಾಬಟ್ಟೆಯಾಗಿದೆ. ಆದ್ದರಿಂದ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಈ ಬಗ್ಗೆ ತುರ್ತು ಗಮನಹರಿಸುವ ಅಗತ್ಯವಿದೆ ಎಂದರು.

ಮಕ್ಕಳ ವಿದ್ಯಾಭ್ಯಾಸದಿಂದ ಹಿಡಿದು ಪ್ರತಿಯೊಂದು ಆಟೋಗಳನ್ನು ಅವಲಂಬಿಸಿರುವ ಆಟೋ ಚಾಲಕರ ಕುಟುಂಬಗಳು ಇಂದು ಬೀದಿ ಪಾಲಾಗುವ ಪರಿಸ್ಥಿತಿಗೆ ಬಂದಿವೆ, ಒಂದಡೆ ಆಟೋ ಗ್ಯಾಸ್ ಅಭಾವ ಹೆಚ್ಚಾಗಿದ್ದು, ಹಣ ಕೊಟ್ಟರೂ ಗ್ಯಾಸ್ ಸಿಗುತ್ತಿಲ್ಲ ಇದರಿಂದ ಜೀವನ ನಿರ್ವಹಣೆ ಕಷ್ಟವಾಗಿದೆ ಎಂದರು.

ಇನ್ನೊಂದೆಡೆ ಆಟೋ ಗ್ಯಾಸ್ ಬೆಲೆ ದಿನೇ ದಿನೆ ಹೆಚ್ಚಳವಾಗುತ್ತಿದ್ದು, ಇದೂ ಕೂಡ ನಮಗೆ ಸಮಸ್ಯೆಯಾಗಿದೆ. ಅಲ್ಲದೆ ನಾವು ಕೇಳಿದಷ್ಟು ಆಟೋ ಗ್ಯಾಸ್ ಇಲ್ಲದಿರುವುದು ಮತ್ತಷ್ಟು ಸಮಸ್ಯೆಗೆ ಕಾರಣವಾಗಿದೆ, ಬೆಲೆ ಏರಿಕೆಯಿಂದ ದಿನಕ್ಕೆ ನೂರು ರೂಪಾಯಿ ದುಡಿಯುವುದು ಕೂಡ ಕಷ್ಟವಾಗಿದೆ. ಇದನ್ನು ಗಂಭೀರವಾಗಿ ಪರಿಗಣಿಸಿ ಸಂಬಂಧಿಸಿದವರು ನಮಗೆ ಪರಿಹಾರ ಕಲ್ಪಿಸಬೇಕು ಎಂದು ಮನವಿ ಮಾಡಿದರು.

ಬೇರೆ ಕಡೆಗೆ ಹೋಲಿಸಿದರೆ ಕರ್ನಾಟಕದಲ್ಲಿ ಮಾತ್ರ ಈ ರೀತಿ ಸಮಸ್ಯೆ ಎದುರಾಗಿದೆ. ಇದರಲ್ಲಿ ಸರ್ಕಾರಗಳ ನಿರ್ಲಕ್ಷ್ಯವೂ ಎದ್ದು ಕಾಣುತ್ತಿದೆ. ಕೂಡಲೇ ನಮ್ಮ ಸಮಸ್ಯೆಗೆ ಆಳುವ ಸರ್ಕಾರಗಳು ಸ್ಪಂದಿಸಬೇಕು ಎಂದು ಮನವಿ ಮಾಡಿದರು.

# ಗಣಿಗಾರಿಕೆಗೆ ಪಟ್ಟು: ಪ್ರತಿಭಟನಾ ನಿರತ ಇಬ್ಬರು ಅಸ್ವಸ್ಥ




ಹಾಸನ: ಬದುಕಿಗೆ ಆಧಾರವಾಗಿರುವ ಕಲ್ಲು ಗಣಿಗಾರಿಕೆ ಮುಂದುವರಿಸಲು ಅನುಮತಿ ನೀಡಬೇಕು ಹಾಗೂ ಅದಕ್ಕೆ ಅಡ್ಡಿಪಡಿಸುತ್ತಿರುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ನಗರದ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸುತ್ತಿದ್ದ ಆಲೂರು ತಾಲೂಕು ಜಯಂತಿ ನಗರದ ಬೋವಿ ಕಲ್ಲು ಕುಟುಕರ ಸಂಘದ ಸದಸ್ಯರು ನಡೆಸುತ್ತಿರುವ ಪ್ರತಿಭಟನೆ ಮುಂದುವರಿಸಿದ್ದು ಇಬ್ಬರು ದಿಢೀರ್ ಅಸ್ವಸ್ಥಗೊಂಡಿದ್ದರಿಂದ ಆಸ್ಪತ್ರೆಗೆ ಕರೆದೊಯ್ಯಲಾಯಿತು.

ತಮ್ಮ ಗ್ರಾಮದಲ್ಲಿ ಆರ್ಥಿಕ, ಸಾಮಾಜಿಕ, ಶೈಕ್ಷಣಿಕವಾಗಿ ಹಿಂದುಳಿದಿರುವ ಸುಮಾರು 250–300 ಜನರು ಸ್ವಾವಲಂಬಿ ಜೀವನ ನಡೆಸಲು ಸ.151 ರ 3 ಎಕರೆ ಸರ್ಕಾರಿ ಗೋಮಾಳದಲ್ಲಿ ಕಲ್ಲು, ಸೈಜುಗಲ್ಲು ಗಣಿಗಾರಿಕೆ ಮಾಡುತ್ತಿದ್ದೆವು. ನಾವು ಯಾವುದೇ ಸ್ಫೋಟ ಮಾಡದೆ ಮಾನವ ಶ್ರಮದಿಂದ ಸುತ್ತಿಗೆ, ಉಳಿ, ಚಮಟಿಗೆ ಬಳಸಿ ಸೈಜುಗಲ್ಲು ಒಡೆದುಕೊಂಡು ಜೀವನ ಸಾಗಿಸುತ್ತಿದ್ದೇವೆ. ನಮಗೆ ಯಾವುದೇ ಸ್ವಂತ ಭೂಮಿ ಇಲ್ಲ. ಆದರೆ ಹೊಸಮಠ ಗ್ರಾಮದ ಸವರ್ಣೀಯರು ಸುಳ್ಳು ಕಾರಣ ನೀಡಿ ಅಡ್ಡಿಪಡಿಸುತ್ತಿದ್ದಾರೆ. ಇತ್ತೀಚೆಗೆ ಕೆಲ ಸಂಘಟನೆಗಳ ಪ್ರತಿಭಟನೆ ಹಿನ್ನೆ ಜಿಲ್ಲಾಡಳಿತ ತಾತ್ಕಾಲಿಕವಾಗಿ ಕ್ವಾರಿಯನ್ನು ಸ್ಥಗಿತಗೊಳಿಸಿರುವುದರಿಂದ ನಮ್ಮ ಜೀವನಕ್ಕೆ ತೊಂದರೆಯಾಗಿದೆ ಎಂದು ಅಳಲು ತೋಡಿಕೊಂಡರು.

ನಾವು ಕಲ್ಲು ಗಣಿಗಾರಿಕೆಯಿಂದ ಯಾರಿಗೂ ತೊಂದರೆ ನೀಡುತ್ತಿಲ್ಲ. ಹಾಗಾಗಿ ಸಂಬಂಧಪಟ್ಟವರು ಪರಿಶೀಲನೆ ನಡೆಸಿ ಕಲ್ಲುಗಣಿಗಾರಿಕೆ ಪುನರಾರಂಭಕ್ಕೆ ಅನುಮತಿ ನೀಡಬೇಕು ಎಂದು ಮನವಿ ಮಾಡಿದರು.

ಈ ವೇಳೆ ಬೆಳಗ್ಗೆ ಸ್ಥಳದಲ್ಲೇ ಊಟ ಮಾಡಿ ಪ್ರತಿಭಟನೆ ಮುಂದುವರಿಸುತ್ತಿದ್ದ ವೇಳೆ ಇಬ್ಬರು ಅಸ್ವಸ್ಥಗೊಂಡಿದ್ದು, ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಕಲ್ಲು ಗಣಿಗಾರಿಕೆಗೆ ಅನುಮತಿ ನೀಡುವವರೆಗೂ ನಮ್ಮ ಪ್ರಾಣ ಹೋದರೂ ಸರಿ ಹೋರಾಟದಿಂದ ಹಿಂದೆ ಸರಿಯುವುದಿಲ್ಲ ಎಂದು ಎಚ್ಚರಿಕೆ ನೀಡಿದರು. ಪ್ರತಿಭಟನೆಯಲ್ಲಿ ಮಹದೇವ, ಚಿದಾನಂದ, ನಂದೀಶ್, ಆರ್ಮುಗ, ಅಂಬಿಕ, ಸರೋಜ ಭಾಗಿಯಾಗಿದ್ದರು.

# ದಂಪತಿ ಮೇಲೆ ಹಲ್ಲೆ ಖಂಡಿಸಿ ಬೃಹತ್ ಪ್ರತಿಭಟನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**

ಅರಸೀಕೆರೆ: ಬೈಕ್‌ನಲ್ಲಿ ಹೊರಟಿದ್ದ ದಂಪತಿಯನ್ನು ತಡೆದು ಹಲ್ಲೆ ನಡೆಸಿರುವವರನ್ನು ಬಂಧಿಸಬೇಕು ಎಂದು ಆಗ್ರಹಿಸಿ ಶನಿವಾರ ನಗರದಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಯಿತು.

ನಾಗರಿಕರ ವೇದಿಕೆ, ಹಿಂದುಪರ ಸಂಘಟನೆಗಳು ಕರೆ ಕೊಟ್ಟಿದ್ದ ಸ್ವಯಂ ಪ್ರೇರಿತ ಬಂದ್‌ಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು. ಅಂಗಡಿ ಮುಂಗಟ್ಟುಗಳನ್ನು ಬಂದ್ ಮಾಡಿ ಘಟನೆಯನ್ನು ಖಂಡಿಸಲಾಯಿತು. ರಾಷ್ಟ್ರೀಯ ಹೆದ್ದಾರಿಯಲ್ಲಿ ವಾಹನಗಳ ಸಂಚಾರಕ್ಕೆ ವ್ಯತ್ಯಯವಾಗಿ ಪ್ರಯಾಣಿಕರು ಪರದಾಡಿದರು. ರಸ್ತೆ ಮಧ್ಯೆ ಜಮಾಯಿಸಿದ ಪ್ರತಿಭಟನಾ ನಿರತರ ಮನವೊಲಿಸಲು ಪೊಲೀಸರು ಹರಸಾಹಸಪಟ್ಟರು.




ಜೆಡಿಎಸ್ ಮುಖಂಡ ಎನ್. ಆರ್. ಸಂತೋಷ್ ಮಾತನಾಡಿ, ಬಹುಸಂಖ್ಯಾತರ ಒಗ್ಗಟ್ಟಿನ ಕೊರತೆ ಲಾಭ ಪಡೆದಿರುವ ಸಮಾಜ ವಿರೋಧಿ ಗೂಂಡಾಗಳು ದೇವಾಲಯಕ್ಕೆ ತೆರಳಿ ಬರುತ್ತಿದ್ದ ದಂಪತಿ ಮೇಲೆ ಹಲ್ಲೆ ಮಾಡಿರುವುದು ಖಂಡನೀಯ. ಹಲ್ಲೆಯ ಸಮಗ್ರ ದೃಶ್ಯ ಮೊಬೈಲ್ ಕ್ಯಾಮರಾದಲ್ಲಿ ಸೆರೆಯಾಗಿದೆ. ಹೀಗಿದ್ದರೂ ಪೊಲೀಸರು ಆರೋಪಿಗಳನ್ನು ಇದೂವರೆಗೂ ಬಂಧಿಸಿಲ್ಲ. ನ್ಯಾಯ ದೊರಕಿಸಬೇಕಿರುವ ಆರಕ್ಷಕ ಇಲಾಖೆ ಯಾರ ಕಪಿಮುಷ್ಟಿಯಲ್ಲಿದೆ ಎಂಬುದನ್ನು ಬಹಿರಂಗಪಡಿಸಬೇಕು. ಪದೇ ಪದೇ ಇಂತಹ ಘಟನೆಗಳು ಮರುಕಳಿಸುತ್ತಿರುವುದು ಕಾನೂನು ಸುವ್ಯವಸ್ಥೆ ಬಗ್ಗೆ ಜನರಿಗೆ ನಂಬಿಕೆ ಕಡಿಮೆಯಾಗಲಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕೆಂದರು.

ಗೂಂಡಾಗಿರಿ ಪ್ರದರ್ಶನ ಮಾಡಿದ ನಗರಸಭೆ ಮಾಜಿ ಅಧ್ಯಕ್ಷ ಸಮೀವುಲ್ಲಾ ಪುತ್ರ ಹಾಗು ಆತನ ಸಹಚರರನ್ನು ತಕ್ಷಣ ಬಂಧಿಸಬೇಕು. ರಾಜಕೀಯ ಒತ್ತಡಕ್ಕೆ ಮಣಿದು ನಿರ್ಲಕ್ಷ್ಯ ತೋರಿದರೆ ಅರಸೀಕೆರೆ ತಾಲ್ಲೂಕು ಬಂದ್‌ಗೆ ಕರೆ ನೀಡಲಾಗುವುದೆಂದು ಎಚ್ಚರಿಸಿದರು.

ಬಿಜೆಪಿ ಮುಖಂಡ ಜಿವಿಟಿ ಬಸವರಾಜು ಮಾತನಾಡಿ, ಶಾಂತಿ, ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಪೊಲೀಸರ ವೈಫಲ್ಯ ಸಾಬೀತಾಗಿದೆ. ಇಲಾಖೆಯಲ್ಲಿ ದಶಕಗಳಿಂದ ಬೀಡು ಬಿಟ್ಟಿರುವ ಕೆಲ ಇಲಾಖೆ ಸಿಬ್ಬಂದಿ ಕೇಸ್ ದಾಖಲಿಸುವ ಬದಲು ರಾಜಿ ಮಾಡಿಸಲು ಕಸರತ್ತು ಮಾಡಿದೆ. ಇಂತಹ ವಿಷಯ ಲಂಪಟರನ್ನು ಕೂಡಲೇ ಬೇರೆಡೆಗೆ ವರ್ಗಾವಣೆ ಮಾಡಬೇಕು. ಹಲ್ಲೆ ಮಾಡಿದ ಗೂಂಡಾಗಳ ವಿರುದ್ಧ ರೌಡಿ ಶೀಟ್ ತೆರೆದು ಗಡಿಪಾರು ಮಾಡಬೇಕೆಂದು ಆಗ್ರಹಿಸಿದರು.

ವಕೀಲ ವಿವೇಕ್, ಹಿಂದು ಪರ ಸಂಘಟನೆಗಳ ಮುಖಂಡರಾದ ಕೃಷ್ಣ, ಶಿವಶಂಕರ್, ಅರುಣ್ ಕುಮಾರ್ ಇನ್ನಿತರರು ಮಾತನಾಡಿದರು. ನಗರಸಭೆ ಮಾಜಿ ಅಧ್ಯಕ್ಷ ಸಿ.ಗಿರೀಶ್, ಮಾಜಿ ಸದಸ್ಯರಾದ ಹರ್ಷವರ್ಧನ್ ರಾಜ್, ರಮೇಶ್ ನಾಯ್ಡು, ಶಿವನ್‌ರಾಜ್, ವಾಸು, ಶಿವರಾಜ್, ಉಮೇಶ್ ಭೋವಿ, ಸಿದ್ದೇಶ್, ಸಿಂಧೂ ಸೇರಿ ಇತರರಿದ್ದರು.

ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸುವುದಾಗಿ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಎಂ. ಕೆ.ತಮ್ಮಯ್ಯ ಭರವಸೆ ನೀಡಿದ ಬಳಿಕ ಹೋರಾಟ ಹಿಂಪಡೆಯಲಾಯಿತು.

# ಪತ್ರಕರ್ತರು ಮಾನ ಹಾನಿ ಪದ ಬಳಸುವಾಗ ಎಚ್ಚರವಿರಲಿ

## ವಕೀಲ ಸೂರ್ಯ ಮುಕುಂದರಾಜ್ ಸಲಹೆ | ಪತ್ರಕರ್ತರ ಸಂಘದಿಂದ ಕಾರ್ಯಾಗಾರ

**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**

ಹಾಸನ: ಆಧುನಿಕತೆ ಬೆಳೆದಂತೆ ಮಾಧ್ಯಮ ಕ್ಷೇತ್ರಗಳಲ್ಲಿ ಸಾಕಷ್ಟು ಬದಲಾವಣೆಗಳಾಗಿದ್ದು ಸಮಾಜದ ಪ್ರತಿಯೊಬ್ಬರು ಪತ್ರಕರ್ತರೇ ಆಗಿದ್ದಾರೆ. ಆದರೆ ಸುದ್ದಿ ತಿದ್ದುವ ಸರಿಪಡಿಸುವ ವ್ಯವಸ್ಥೆ ಇಲ್ಲದ್ದರಿಂದ ಮಾನನಷ್ಟ ಪ್ರಕರಣಗಳನ್ನು ಎದುರಿಸುವಂತಾಗಿದೆ ಎಂದು ಖ್ಯಾತ ವಕೀಲ ಸೂರ್ಯ ಮುಕುಂದ್‌ರಾಜ್ ಅಭಿಪ್ರಾಯಪಟ್ಟರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದಲ್ಲಿ ಸಾಂಸ್ಕೃತಿ ಸಮಿತಿಯ ಸ್ಟಡಿ ವಿತ್ ಸೊಸೈಟಿ ಪರಿಕಲ್ಪನೆಯಡಿ ಶನಿವಾರ ಹಮ್ಮಿಕೊಂಡಿದ್ದ ಮಾನನಷ್ಟ ಮೊಕದ್ದಮೆ ಹಾಗು ಸಾರ್ವಜನಿಕ ಹಿತಾಸಕ್ತಿಗಳ ಜೊತೆ ಪತ್ರಿಕಾ ರಂಗ ವಿಷಯ ಕುರಿತು ಮಾತನಾಡಿ, ಭಾರತದಲ್ಲಿ ಪತ್ರಿಕಾ ರಂಗಕ್ಕೆ ತನ್ನದೇಯಾದ ಮಹತ್ವವಿದೆ. ಇತ್ತೀಚೆಗೆ ಸಾಮಾಜಿಕ ಜಾಲತಾಣಗಳ ಹಾವಳಿ ಹೆಚ್ಚಾದ್ದರಿಂದ ಪ್ರತಿಯೊಬ್ಬರು ಪತ್ರಕರ್ತರಾಗಬಹುದಾಗಿದೆ. ಸಂಪಾದಕ, ಉಪ ಸಂಪಾದಕ ಇಲ್ಲದ ಪತ್ರಿಕೋದ್ಯಮ ಈಗ ಚಾಲ್ತಿಯಲ್ಲಿದ್ದು, ಸುದ್ದಿ ಬರೆಯುವಾಗ ಯಾವ ಪದ ಬಳಸಬೇಕು, ಬಳಸಬಾರದು ಎಂಬ



> ಇತ್ತೀಚಿನ ಅಂಕಿ ಅಂಶಗಳ ಪ್ರಕಾರ ಪತ್ರಕರ್ತರ ವಿರುದ್ಧ ಮಾನನಷ್ಟ ಮೊಕದ್ದಮೆಗಳು ಹೆಚ್ಚಾಗಿ ದಾಖಲಾಗುತ್ತಿವೆ. ವರದಿಗಾರರು ಯಾವುದೇ ಸುದ್ದಿ ಪ್ರಕಟಿಸುವಾಗ ಸೂಕ್ತ ದಾಖಲೆಗಳನ್ನು ಹೊಂದುವುದು ಅತಿ ಮುಖ್ಯವಾಗುತ್ತದೆ.
> – ಸೂರ್ಯ ಮುಕುಂದ್‌ರಾಜ್, ವಕೀಲ

ವಿವೇಕವೂ ಇಲ್ಲದಂತಾಗಿದೆ. ಆದ್ದರಿಂದ ಅತ್ಯಂತ ಜಾಗರೂಕರಾಗಿ ಕೆಲಸ ಮಾಡಬೇಕಾಗುತ್ತದೆ ಎಂದರು.

ಮಾನನಷ್ಟ ಮೊಕದ್ದಮೆ ವಿಚಾರದಲ್ಲಿ ನ್ಯಾಯಾಂಗದಲ್ಲೇ ಕೆಲವು ವೈರುಧ್ಯಗಳಿವೆ. ಸಮರ್ಥವಾಗಿ ವಾದ ಮಂಡಿಸಿದರೆ ಪ್ರಕರಣದಲ್ಲಿ ಜಯ ಗಳಿಸಬಹುದು. ಮಾನನಷ್ಟ ಮೊಕದ್ದಮೆ ಹೂಡಾದಕ್ಷಣ ದಂಡನೆ ಆಗಲಿದೆ ಎಂದಲ್ಲ. ನೀವು ನ್ಯಾಯಬದ್ಧವಾಗಿದ್ದರೆ ಸಾಕ್ಷಿ ಕರೆದರೆ ನಿರಾಕರಿಸಬಹು, ರೈಟ್ ಟು ಸೈಲೆನ್ಸ್ ಎಂದು ಸುಮ್ಮನಿರಬಹುದು. ಆಕ್ಟ್ 499/500 ಅಡಿ ನಾವು ಪೂರಕ ದಾಖಲೆ ಅಲ್ಲಿಸಲು ಅವಕಾಶ ಇದೆ. ನೀವು ಮಾನ ಹಾನಿ ಮಾಡದೇ ಇದ್ದರೆ ಅದಕ್ಕೆ ಪೂರಕವಾದ ದಾಖಲೆ ನಿಮ್ಮ ಬಳಿ ಇದ್ದರೆ, ಅದನ್ನು ನ್ಯಾಯಾಲಯದ ಮುಂದೆ ಸಾಬೀತುಪಡಿಸಿದರೆ ಪಾರಾಗಬಹುದೆಂದರು.

ರಹಸ್ಯ ಕಾರ್ಯಾಚರಣೆ ಮೂಲಕ ಅಕ್ರಮ, ಕಾನೂನು ಬಾಹಿರ ಚಟುವಟಿಕೆ ಬಯಲಿಗೆ ಎಳೆಯಬಹುದು ಎಂದು ಹೇಳಿದರು.

ಯಾರೋ ಒಬ್ಬ ಅಧಿಕಾರಿ, ರಾಜಕಾರಣಿ ಕುರಿತು ಭ್ರಷ್ಟಾಚಾರ ಅಥವಾ ಇನ್ಯಾವುದೋ ವಿಷಯಕ್ಕೆ ಸಂಬಂಧಿಸಿ ಸುದ್ದಿ ಮಾಡುವುದು ಗೊತ್ತಾದರೆ ತಕ್ಷಣವೇ ಅವರು ನ್ಯಾಯಾಲಯದಿಂದ ತಡೆಯಾಜ್ಞೆ ತರುತ್ತಾರೆ. ಅದು ಸಿವಿಲ್ ಪ್ರಕರಣದ ರೀತಿಯಾಗಿರುತ್ತದೆ ಎಂದರು.

ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಉಪಾಧ್ಯಕ್ಷ ಎಚ್.ಬಿ.ಮದನಗೌಡ ಅವರು ಮಾತನಾಡಿ, ಪತ್ರಕರ್ತರ ಅರಿವಿನ ಮಟ್ಟ ಹೆಚ್ಚಿಸುವ ಇಂತಹ ಕಾರ್ಯಕ್ರಮ ರಾಜ್ಯದ ಯಾವ ಜಿಲ್ಲೆಯಲ್ಲೂ ನಡೆಯುತ್ತಿಲ್ಲ. ಇದೊಂದು ಮಾದರಿ ಕಾರ್ಯಕ್ರಮವಾಗಿದೆ ಎಂದರು.

ಸಂಘದ ಜಿಲ್ಲಾಧ್ಯಕ್ಷ ಜೆ.ಆರ್. ಕೆಂಚೇಗೌಡ ಮಾತನಾಡಿ, ವಕೀಲರು, ಪತ್ರಕರ್ತರು ಸಮಾಜದಲ್ಲಿ ಬಹುಮುಖ್ಯ ಪಾತ್ರ ವಹಿಸುವುದರಿಂದ ನಿರಂತರ ಅಧ್ಯಯನದಲ್ಲಿ ತೊಡಗಬೇಕು. ಆದರೆ ಇತ್ತೀಚಿನ ದಿನಗಳಲ್ಲಿ ಪ್ರಬುದ್ಧರ ಕೊರತೆ ಕಾಡುತ್ತಿದೆ. ಈಗಿನ ವಿದ್ಯಾರ್ಥಿಗಳು ಕಾನೂನು ಬಗ್ಗೆ ತಿಳಿವಳಿಕೆ ಹೊಂದಬೇಕೆಂದು ಸಲಹೆ ನೀಡಿದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ 2024ನೇ ಸಾಲಿನ ಅಭಿವೃದ್ಧಿ, ಸಾಮಾಜಿಕ ಮಾನವೀಯ ವರದಿ ವಿಭಾಗದ ಪ್ರಶಸ್ತಿಗೆ ಭಾಜನರಾಗಿರುವ ದೂರದರ್ಶನ ವಾಹಿನಿಯ ಹಿರಿಯ ವರದಿಗಾರ ಮೋಹನ್ ಕೃಷ್ಣ, ರೈತರ ಬದುಕು ಬವಣೆ ವರದಿಗೆ ತಗಡೂರು ಕಮಲಮ್ಮ–ವೀರೇಗೌಡ ಪ್ರಶಸ್ತಿ ಪಡೆದಿರುವ ಚನ್ನರಾಯಪಟ್ಟಣದ ಪತ್ರಕರ್ತ ಜಯರಾಮ್ ಹಾಗೂ ರಾಯಚೂರು ಜಿಲ್ಲೆ ಲಿಂಗಸುಗೂರು ಸಿದ್ದರಾಮಪ್ಪ ಕೆಂಭಾವಿ ಹೆಸರಿನಲ್ಲಿ ಅವರ ಪುತ್ರ ಸ್ಥಾಪಿಸಿರುವ ಪ್ರಶಸ್ತಿಗೆ ಭಾಜನರಾಗಿರುವ ಬೇಲೂರು ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಮಾಜಿ ಅಧ್ಯಕ್ಷೆ ಭಾರತಿಗೌಡ ಅವರನ್ನು ಜಿಲ್ಲಾ ಪತ್ರಕರ್ತರ ಸಂಘದಿಂದ ಸನ್ಮಾನಿಸಲಾಯಿತು.

ಸಂಘದ ಕಾರ್ಯದರ್ಶಿ ಕೆ.ಎಂ. ಹರೀಶ್ ಸ್ವಾಗತಿಸಿ, ನಿರೂಪಿಸಿದರು. ಪ್ರಧಾನ ಕಾರ್ಯದರ್ಶಿ ಕೆ.ಜಿ.ಸುರೇಶ್ ಪ್ರಾಸ್ತಾವಿಕ ಮಾತುಗಳನ್ನಾಡಿದರು. ವಕೀಲ ಸೂರ್ಯ ಮುಕುಂದರಾಜ್ ಅವರನ್ನು ಸಂಘದಿಂದ ಅಭಿನಂದಿಸಲಾಯಿತು. ಮಾಜಿ ಅಧ್ಯಕ್ಷ ಬಾಳ್ಳುಗೋಪಾಲ್, ಸಾಂಸ್ಕೃತಿಕ ಸಮಿತಿ ಸಂಚಾಲಕ ಚಲಂ ಹಾಡ್ಲಹಳ್ಳಿ, ಪ್ರಕಾಶ್, ಮಲ್ಲಿಕಾರ್ಜುನ ಕೊಚ್ಚರಗಿ, ಚೈತ್ರಾ ಮಹಾಲಿಂಗು ಇತರರಿದ್ದರು.

# ಭಾರತ-ಶ್ರೀಲಂಕಾ ಸಂಸ್ಕೃತಿ ಬೆಸುಗೆ ಶ್ಲಾಘನೀಯ


**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**

ಚನ್ನರಾಯಪಟ್ಟಣ: ಭಾರತ–ಶ್ರೀಲಂಕಾ ದೇಶಗಳ ಸಾಂಸ್ಕೃತಿಕ ಕಾರ್ಯಕ್ರಮಗಳ ಪರಂಪರೆಯ ವಿನಿಮಯಕ್ಕೆ ವೇದಿಕೆ ಸೃಷ್ಟಿಸಿದ್ದು ಶ್ಲಾಘನೀಯ ಎಂದು ಶಾಸಕ ಸಿ.ಎನ್.ಬಾಲಕೃಷ್ಣ ಹೇಳಿದರು.

ಪಟ್ಟಣದ ಅಕ್ಷರ ಶಾಲೆಯಲ್ಲಿ ಶ್ರೀಲಂಕಾದ ಫ್ಯೂಚರ್ ಲೀಡರ್ ಸಂಸ್ಥೆಯ ಸಹಯೋಗದೊಂದಿಗೆ ನಡೆದ ವಸುದೈವ ಕುಟುಂಬಕಂ ಭಾರತ– ಶ್ರೀಲಂಕಾ ದೇಶಗಳ ವಿದ್ಯಾರ್ಥಿಗಳ ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ವಿವಿಧತೆಯಲ್ಲಿ ಏಕತೆ ಮೂಡಿಸುವ ಸಾಂಸ್ಕೃತಿಕ ವೈಭವ ಭಾರತದ್ದಾಗಿದೆ ಎಂದರು.

ರಾಜ್ಯ ಕಾರ್ಯ ನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ ಎಚ್.ಬಿ.ಮದನಗೌಡ ಮಾತನಾಡಿ, ಬೆಂಗಳೂರಿನ ನಗರದಲ್ಲಿ ಈ ಕಾರ್ಯಕ್ರಮ ಮಾಡುವ ನಿರೀಕ್ಷೆ ಇತ್ತು. ಅಕ್ಷರ ಶಾಲೆಯ ಆಡಳಿತ ಮಂಡಳಿಯವರ ಸಹಕಾರದಿಂದ ಚನ್ನರಾಯಪಟ್ಟಣದಲ್ಲಿ ಆಯೋಜಿಸಲಾಗಿದ್ದು, ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಮುಂದಿನ ದಿನಗಳಲ್ಲಿ ಸ್ಥಳೀಯ ಕಲಾವಿದರಿಗೆ ಶ್ರೀ ಲಂಕಾದಲ್ಲಿ ಕಾರ್ಯಕ್ರಮ ನೀಡುವ ಅವಕಾಶ ಒದಗಿಬರಲಿದೆ ಎಂದು ತಿಳಿಸಿದರು.

ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಜೆ.ಆರ್.ಕೆಂಚೇಗೌಡ ಮಾತನಾಡಿ, ದೇಶಗಳ ನಡುವಿನ ಶ್ರೀಮಂತ ಸಂಸ್ಕೃತಿ, ಪರಂಪರೆಯನ್ನು ಇಂತಹ ಕಾರ್ಯಕ್ರಮಗಳು ತಿಳಿಸಿಕೊಡುತ್ತವೆ. ವಿಭಿನ್ನ ಸಂಸ್ಕೃತಿಯ ಪರಿಚಯವಾಗುತ್ತದೆ. ಶ್ರೀಲಂಕಾ ಕಲಾವಿದರು ಕರ್ನಾಟಕದಲ್ಲಿ ಪ್ರಥಮ ಬಾರಿಗೆ ಗ್ರಾಮೀಣ ಪ್ರದೇಶದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳ ಅನಾವರಣಗೊಳಿಸಿದ್ದಾರೆ. ಭಾರತ ಮತ್ತು ಸಿಂಹಳಿಯರ ಸಾಂಸ್ಕೃತಿಕ ವೈಭವದ ಸಮಾಗಮ ಇದಾಗಿದೆ ಎಂದು ಹೇಳಿದರು.



ಶ್ರೀಲಂಕಾದ ಕಲಾವಿದರು ಮತ್ತು ಅಕ್ಷರ ಶಾಲೆಯ ವಿದ್ಯಾರ್ಥಿಗಳು ಭರತನಾಟ್ಯ, ಯಕ್ಷಗಾನ ಹಾಗೂ ವಿವಿಧ ಸಾಂಸ್ಕೃತಿಕ ಪ್ರದರ್ಶನಗಳ ಮೂಲಕ ಭಾರತ–ಶ್ರೀಲಂಕಾ ನಡುವಿನ ಸ್ನೇಹ ಮತ್ತು ಸಾಂಸ್ಕೃತಿಕ ಸಂಬಂಧವನ್ನು ಬಿಂಬಿಸಿದ್ದಾರೆ ಎಂದು ತಿಳಿಸಿದರು.

ಅಕ್ಷರ ಶಾಲೆಯ ಅಧ್ಯಕ್ಷೆ ಪಿ.ಸರೋಜಾದೇವಿ, ಶ್ರೀಲಂಕಾ ಸಾಂಸ್ಕೃತಿಕ ಸಲಹೆಗಾರ ಉಪುಲ್ ಜನಕ ಜಯಸಿಂಘೆ ಮಾತನಾಡಿದರು. ಶ್ರೀಲಂಕಾದ ಫ್ಯೂಚರ್ ಲೀಡರ್ ಸಂಸ್ಥೆಯ ಅಧ್ಯಕ್ಷೆ ಪ್ರಿಯಾಂಗ ಬನರನಾಯಕ್, ಅಕ್ಷರ ಶಾಲೆಯ ಕಾರ್ಯದರ್ಶಿ ಎಂ.ಆರ್.ಅನಿಲ್ ಕುಮಾರ್, ಖಜಾಂಚಿ ಸಿ.ಸಿ. ಚೇತನ್, ನಿರ್ದೇಶಕ ತಿರುಮಲ ಪ್ರಸಾದ್, ಪ್ರಾಂಶುಪಾಲ ಸುನೀಲ್ ಪ್ಯಾಟ್ರಿಕ್ ಇದ್ದರು.

ಎರಡು ಗಂಟೆಗಳ ಕಾಲ ಶ್ರೀಲಂಕಾ ತಂಡದ ಕೆಎಂಜಿ ಇಂಡಿಕನಿರೋಷನ್, ಶಾಂತಿ ಕುಮಾರಿ ಜಯನಿಥಿ, ಟಿ.ಬಿ. ಸುಶಾಂತ ಭಂಡಾರ ಸೇರಿ 17 ಕಲಾವಿದರು ಹಾಗು ಅಕ್ಷರ ಶಾಲೆಯ ವಿದ್ಯಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು.

# ಮೇ 1ರಂದು ಸಕಲೇಶಪುರದಲ್ಲಿ ಕಾರ್ಮಿಕರ ದಿನಾಚರಣೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಟಿಂಬರ್ ಕಾರ್ಮಿಕರ ಸಂಘ ಹಾಗೂ ಅಸಂಘಟಿತ ಕಾರ್ಮಿಕರು ತಾಲೂಕಿನ ಎಲ್ಲಾ ಕಾರ್ಮಿಕರ ಸಹಯೋಗದಲ್ಲಿ ಮೇ 1ರಂದು ಕಾರ್ಮಿಕರ ದಿನಾಚರಣೆ ಹಮ್ಮಿಕೊಳ್ಳಲಾಗಿದೆ ಎಂದು ಎಐಟಿಯುಸಿ ಜಿಲ್ಲಾ ಅಧ್ಯಕ್ಷ ಹರೀಶ್ ಹರೀಶ್ ಹೇಳಿದರು.



ಪಟ್ಟಣದಲ್ಲಿ ಟಿಂಬರ್ ಕಾರ್ಮಿಕರ ಸಂಘದ ಕಚೇರಿಯಲ್ಲಿ ಮೇ 1ರಂದು ನಡೆಯಲಿರುವ ಕಾರ್ಮಿಕ ದಿನಾಚರಣೆಯ ಪೋಸ್ಟರ್ ಬಿಡುಗಡೆಗೊಳಿಸಿ ಮಾತನಾಡಿ, ಟಿಂಬರ್ ಕಾರ್ಮಿಕರ ಬದುಕು ಅತ್ಯಂತ ಕಷ್ಟಕರವಾಗಿದ್ದು ಕೆಲಸ ಮಾಡುವಾಗ ಯಾವುದೇ ಸಂದರ್ಭದಲ್ಲಿ ಅಪಘಾತಗಳು ಉಂಟಾಗುವ ಸಾಧ್ಯತೆ ಇದೆ. ಅಪ್ಪಿತಪ್ಪಿ ಅಪಘಾತವಾದರೆ ಕಾರ್ಮಿಕನ ಆಸ್ಪತ್ರೆ ಖರ್ಚು ನಿಭಾಯಿಸುವುದು ಯಾರು. ಕುಟುಂಬದ ನಿರ್ವಹಣೆ ಮಾಡುವವರು ಯಾರು. ಹೀಗಾಗಿ ಸರ್ಕಾರ ಕಾರ್ಮಿಕರಿಗೆ ಸರಿಯಾದ ಸೌಲಭ್ಯ ಒದಗಿಸಬೇಕು. ತಮ್ಮ ಹಕ್ಕುಗಳಿಗಾಗಿ ಟಿಂಬರ್ ಕಾರ್ಮಿಕರು ಸಂಘಟಿತರಾಗಬೇಕಿದ್ದು ಈ ಹಿನ್ನೆಲೆಯಲ್ಲಿ ಮೇ 1 ರಂದು ಪಟ್ಟಣದ ಪುರಭವನದಲ್ಲಿ ಟಿಂಬರ್ ಕಾರ್ಮಿಕರ ಸಂಘ, ಅಸಂಘಟಿತ ಕಾರ್ಮಿಕರು ಹಾಗೂ ಇತರ ಕಾರ್ಮಿಕ ಸಂಘಗಳು, ಪ್ರಗತಿಪರ ಸಂಘಟನೆಗಳ ಸಹಯೋಗದಲ್ಲಿ ಕಾರ್ಮಿಕ ದಿನಾಚರಣೆ ಆಯೋಜಿಸಲಾಗಿದ್ದು ಕಾರ್ಯಕ್ರಮದ ಅಂಗವಾಗಿ ಬೆಳಿಗ್ಗೆ 8.30ಕ್ಕೆ ಸರಿಯಾಗಿ ಪಟ್ಟಣದ ತೇಜಸ್ವಿ ಸರ್ಕಲ್‌ನಿಂದ ರ್‍ಯಾಲಿ ಮುಖಾಂತರ ಹಳೆ ಬಸ್ ನಿಲ್ದಾಣಕ್ಕೆ ತೆರಳಿ ಅಲ್ಲಿರುವ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ ನಂತರ ಹಾಡ್ಯ ಸುಬ್ಬೇ ಗೌಡ ಪುರಭವನಕ್ಕೆ ತೆರಳಲಾಗುತ್ತದೆ. ಕಾರ್ಯಕ್ರಮದ ಉದ್ಘಾಟನೆಯನ್ನು ಕ್ಷೇತ್ರದ ಜನಪ್ರಿಯ ಶಾಸಕರಾದ ಸಿಮೆಂಟ್ ಮಂಜು ಮಾಡಲಿದ್ದು, ಟಿಂಬರ್ ಕಾರ್ಮಿಕರ ಸಂಘದ ಅಧ್ಯಕ್ಷ ಶಹಜಾನ್ ಅಧ್ಯಕ್ಷತೆ ವಹಿಸಿಕೊಳ್ಳಲಿದ್ದಾರೆ ಎಂದರು.

ಟಿಂಬರ್ ಕಾರ್ಮಿಕರ ಸಂಘದ ತಾಲೂಕು ಅಧ್ಯಕ್ಷ ಶಹಜಾನ್ ಮಾತನಾಡಿ, ಟೆಂಬರ್ ಕೆಲಸ ಅತ್ಯಂತ ಕಷ್ಟಕರವಾಗಿದ್ದು ಹಲವಾರು ಟಿಂಬರ್ ಕಾರ್ಮಿಕರು ಸಾವನ್ನಪ್ಪಿರುವುದು ನಾವು ನೋಡಿದ್ದೇವೆ. ಕುಟುಂಬದ ದುಡಿಯುವ ಯಜಮಾನ ಸಾವನ್ನಪ್ಪಿದರೆ ಆ ಕುಟುಂಬದ ಕಥೆ ಏನು? ಕಾರ್ಮಿಕ ಮೃತಪಟ್ಟಲ್ಲಿ ಅವರ ಕುಟುಂಬಕ್ಕೆ ಕನಿಷ್ಠ ಹಣ ದೊರಕುವಂತೆ ಸರ್ಕಾರ ಸೌಲಭ್ಯ ಕಲ್ಪಿಸಬೇಕು. ಕಾರ್ಮಿಕರು ಪ್ರಮುಖವಾಗಿ ವಸತಿ, ಕುಟುಂಬದ ಆರೋಗ್ಯ ಹಾಗೂ ಮಕ್ಕಳ ಶಿಕ್ಷಣ ವಿಷಯಗಳಲ್ಲಿ ಪರದಾಟ ಮಾಡುತ್ತಿದ್ದು ಈ ಮೂರು ಸಮಸ್ಯೆಗಳನ್ನು ಸರ್ಕಾರ ಬಗೆಹರಿಸಲು ಪ್ರಮುಖವಾಗಿ ಮುಂದಾಗಬೇಕು. ಮಲೆನಾಡು ಭಾಗದ ಪ್ಲಾಂಟೇಶನ್ ಹಾಗೂ ಟಿಂಬರ್ ಕಾರ್ಮಿಕರ ಸಮಸ್ಯೆಗಳನ್ನು ಸರ್ಕಾರದ ಗಮನ ಸೆಳೆಯುವ ನಿಟ್ಟಿನಲ್ಲಿ ಪಟ್ಟಣದಲ್ಲಿ ಮೇ 1ರಂದು ನಮ್ಮ ಸಂಘಟನೆಯ ನೇತೃತ್ವದಲ್ಲಿ ಕಾರ್ಮಿಕ ದಿನಾಚರಣೆ ಆಯೋಜಿಸಲಾಗುತ್ತಿದೆ ಎಂದರು.

ಸಂಘಟನೆ ಗೌರವಾಧ್ಯಕ್ಷ ದೇವರಾಜ್, ಉಪಾಧ್ಯಕ್ಷ ಸೋಮಶೇಖರ್, ಕಾರ್ಯದರ್ಶಿ ದೇವರಾಜ್, ಖಜಾಂಚಿ ಸತೀಶ್, ನಿರ್ದೇಶಕರಾದ ಸಂತೋಷ, ಇರ್ಫಾನ್, ಚಂದ್ರಶೇಖರ್, ಸದಸ್ಯರಾದ ಅಲಕ್ಸ್, ಅಜೀಜ್, ಅಬ್ದುಲ್, ಅಕ್ಬರ್ ಸಿದ್ದಿಕ್ ಇತರರಿದ್ದರು.

# ದುರ್ಗಾಪರಮೇಶ್ವರಿ 54ನೇ ಜಾತ್ರಾ ಮಹೋತ್ಸವ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ವಲ್ಲಭಾಯಿ ರಸ್ತೆಯಲ್ಲಿರುವ ಶ್ರೀ ದುರ್ಗಾಪರಮೇಶ್ವರಿ ಅಮ್ಮನವರ 54ನೇ ಜಾತ್ರಾ ಮಹೋತ್ಸವ ಪ್ರಯುಕ್ತ 1001 ಕಳಸ ಮೆರವಣಿಗೆ ನೆರವೇರಿತು.

ಬೆಳಿಗ್ಗೆ 9 ಗಂಟೆಗೆ ದೇವಸ್ಥಾನದಿಂದ ಹೊರಟ ಉತ್ಸವ ಮಧ್ಯಾಹ್ನ 12 ಗಂಟೆಗೆ ದೇವಿಗೆರೆ ತಲುಪಿ 1001 ಕುಂಭ ಕಳಸದೊಂದಿಗೆ ಮೆರವಣಿಗೆ ಪ್ರಾರಂಭಿಸಲಾಯಿತು. ಗಾಂಧಿ ಬಜಾರ್, ಚನ್ನಕೇಶವ ದೇವಸ್ಥಾನ ರಸ್ತೆ, ಗಣಪತಿ ದೇವಸ್ಥಾನ, ಹಾಸನಾಂಬ ವೃತ್ತ, ಹುಣಸಿನಕೆರೆ ರಸ್ತೆ ಹಾಗೂ ವಲ್ಲಭಾಯಿ ರಸ್ತೆ ಮೂಲಕ ದೇವಸ್ಥಾನಕ್ಕೆ ಮರಳಿತು. ಮಧ್ಯಾಹ್ನ 1 ಗಂಟೆಗೆ ಭಕ್ತರಿಗೆ ಅನ್ನ ಸಂತರ್ಪಣೆ ನೆರವೇರಿತು.

ದೇವಸ್ಥಾನ ಆಡಳಿತ ಸಮಿತಿ ಅಧ್ಯಕ್ಷ ಡಾ.ಬಿ.ಎನ್. ಮಹಂತೇಶ್ ಮಾತನಾಡಿ, ಪ್ರತಿವರ್ಷದಂತೆ ಈ ಬಾರಿಯೂ ಧಾರ್ಮಿ ಕೈಂಕರ್ಯ ಕೈಗೊಳ್ಳಲಾಗಿದೆ. ಜಾತ್ರೆಯ ಅಂಗವಾಗಿ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿದೆ. ಏ. 5ರ ವರೆಗೆ ಜಾತ್ರೆ ನಡೆಯಲಿದೆ ಎಂದರು.



ಏ. 4ರ ಶನಿವಾರ ಸಂಜೆ 4 ಗಂಟೆಗೆ ವಿದ್ಯುತ್ ದೀಪಗಳಿಂದ ಅಲಂಕೃತಗೊಂಡ ಮಂಟಪದಲ್ಲಿ ಅಮ್ಮನವರ ಮೆರವಣಿಗೆ ನಡೆಯಲಿದೆ.

ಏ. 5ರ ಭಾನುವಾರ ಬೆಳಿಗ್ಗೆ 8.30 ರಿಂದ ಓಕುಳಿ, ನಂತರ ಗಂಗಾಸ್ನಾನ ಮುಗಿಸಿ ಅಮ್ಮನವರು ಸ್ವಸ್ಥಾನಕ್ಕೆ ಆಗಮಿಸಲಿದ್ದಾರೆ. ಮಧ್ಯಾಹ್ನ 2.30ಕ್ಕೆ ಭೂತರಾಯ ಸ್ವಾಮಿಗೆ ನೈವೇದ್ಯ ಸೇವೆ ಜರುಗಲಿದೆ. ಜವೇನಹಳ್ಳಿ ಮಠದ ಶ್ರೀ ಸಂಗಮೇಶ್ವರ ಸ್ವಾಮೀಜಿ ಅವರ ಸಾನ್ನಿಧ್ಯದಲ್ಲಿ ಪೂಜಾ ಕಾರ್ಯಕ್ರಮ ನಡೆಯಲಿವೆ ಎಂದು ಹೇಳಿದರು.

# ಎಲ್ಲರ ಹಿತ ಬಯಸುವುದೇ ಸನಾತನ ಸಂಸ್ಕೃತಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ಸರ್ವೇ ಜನ ಸುಖೀನೋ ಭವಂತು ಎನ್ನುವ ಉದಾತ್ತ ಚಿಂತನೆ ಸನಾತನ ಹಿಂದೂ ಸಂಸ್ಕೃತಿಯ ಪರಂಪರೆ ಎಂದು ಶೃಂಗೇರಿ ಶಾರದಾ ಪೀಠದ ಜಗದ್ಗುರು ಶ್ರೀ ವಿಧುಶೇಖರ ಭಾರತೀ ಸ್ವಾಮೀಜಿ ಹೇಳಿದರು.



ನಗರ ಹೊರ ವಲಯದ ಗುಂಡುಕಾನಳ್ಳಿ ಶ್ರೀ ಮಾರುತಿ ಸಚ್ಚಿದಾನಂದ ಆಶ್ರಮದ ಅಧಿದೇವತೆ ಶ್ರೀಲಕ್ಷ್ಮಿ ನರಸಿಂಹ ಸ್ವಾಮಿ, ಪಂಚಮುಖಿ ಗಣಪತಿ, ಸೂರ್ಯ ದೇವರು, ಬಾಲ ಅಂಬಿಕಾ ದೇವಿ, ಶ್ರೀಕಂಠೇಶ್ವರ ಸ್ವಾಮಿ, ಕ್ಷೇತ್ರಪಾಲಕ ಪಂಚಮುಖಿ ಆಂಜನೇಯಸ್ವಾಮಿ ಸಾನ್ನಿಧ್ಯದಲ್ಲಿ ಲೋಕಕಲ್ಯಾಣಾರ್ಥವಾಗಿ ನಡೆದ ನವಚಂಡಿಕಾ ಹೋಮ ಸಮಾರಂಭದ ದಿವ್ಯ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಭಾರತೀಯ ಸನಾತನ ಸಂಸ್ಕೃತಿಯು ಪ್ರಾಚೀನವಾಗಿದ್ದು, ಸರ್ವೇ ಜನ ಸುಖೀನೋ ಭವಂತು ಎನ್ನುವ ಉದಾತ್ತ ಚಿಂತನೆಯನ್ನು ಒಳಗೊಂಡಿದೆ. ನಮ್ಮ ಎಲ್ಲಾ ಧಾರ್ಮಿಕ ಪೂಜಾ ಸಮಾರಂಭ ಹಾಗೂ ಹವನ, ಹೋಮಗಳನ್ನು ಲೋಕ ಕಲ್ಯಾಣಾರ್ಥವಾಗಿ ಪ್ರಾರ್ಥಿಸಿ ವಿಶ್ವದೆಲ್ಲೆಡೆಯ ಅಶಾಂತಿ ಕಾರ್ಮೋಡ ದೂರವಾಗಲಿ. ಉತ್ತಮ ಮಳೆ-ಬೆಳೆಯಾಗಿ ಲೋಕದಲ್ಲಿ ಸುಭಿಕ್ಷೆ ನೆಲೆಸಲಿ ಎಂದು ಪ್ರಾರ್ಥಿಸಿ ಪೂಜಾ ಕಾರ್ಯ ನೆರವೇರಿಸಲಾಗುವುದು ಎಂದು ತಿಳಿಸಿದರು. ಪರಂಪರಾ ಅವಧೂತರಾದ ಸತೀಶ್ ಶರ್ಮ ಗುರೂಜಿ ಮಾತನಾಡಿ, ಜಗದ್ಗುರುಗಳ ದಿವ್ಯ ಸಂಕಲ್ಪದಂತೆ ವಿಷ್ಣು ಪಂಚಾಯತನ ಶಾಸ್ತ್ರದ ವೈಶಿಷ್ಟತೆಯಲ್ಲಿ ಅಗ್ರಪೂಜಿತ ಪಂಚಮುಖಿ ಗಣಪತಿ ಸಕಲ

ಸಂಕಷ್ಟಗಳನ್ನು ದೂರ ಮಾಡಿ, ನೆಮ್ಮದಿ ಕರುಣಿಸುವ ಕರುಣಾ ಮೂರ್ತಿ ಆಗಿದ್ದು, ಸೂರ್ಯ ದೇವನು ಸಕಲ ಜೀವ ಸಂಕುಲಕ್ಕೆ ಬೆಳಕನ್ನು ನೀಡುವ ಜೊತೆಗೆ ಆತ ಚೈತನ್ಯ ನೀಡುವ ಮಹಾ ಮಹಿಮರಾಗಿದ್ದಾರೆ. ಬಾಲ ಅಂಬಿಕಾದೇವಿ ಮಾತೃ ಸ್ವರೂಪಿ ಮಹಾಕಾಳಿಯಾಗಿ ಶಿಷ್ಟರನ್ನು ರಕ್ಷಿಸಿ ದುಷ್ಟರನ್ನು ಶಿಕ್ಷಿಸಿ ಸಂಹರಿಸುವ ಶಕ್ತಿಯಾಗಿದ್ದು, ಶ್ರೀಕಂಠೇಶ್ವರ ಲಯಕರ್ತ, ಮೋಕ್ಷ ಪ್ರಧಾನಕನ್ನೂ ಆಗಿದ್ದು, ವಿಷ್ಣು ಸ್ವರೂಪಿಯಾದ ನರಸಿಂಹ ಸ್ವಾಮಿಯು ಭಕ್ತರ ಪರಿಪಾಲಕನಾಗಿದ್ದು, ನಂಬಿ ಬಂದ ಭಕ್ತರ ಸಕಲ ಇಷ್ಟಾರ್ಥ ಈಡೇರಿಸುವ ಭಗವಂತನಾಗಿದ್ದಾನೆ ಎಂದು ತಿಳಿಸಿದರು.

ಸೃಷ್ಟಿಕರ್ತನಾದ ಭಗವಂತನ ಪ್ರೇರಣೆ ಇಲ್ಲದೆ ಹುಲ್ಲು ಕಡ್ಡಿ ಕದಲುವುದಿಲ್ಲ. ಆತನ ಪ್ರೇರಣೆಯಂತೆ ಸಕಲ ಸದಕ್ತರ ಆಶಯದಂತೆ ಈ ದೇವಾಲಯವನ್ನು ಶಾಸೋಕ್ತವಾಗಿ ನಿರ್ಮಿಸಿ ಲೋಕಾರ್ಪಣೆ ಮಾಡಲಾಗಿದೆ ಎಂದರು.

ಕಣಕಟ್ಟೆ ಆದಿತ್ಯ ಶರ್ಮ ನೇತೃತ್ವದ ವಿಪ್ರರ ತಂಡ ಹೋಮ, ಹವನಗಳ ಪೂಜಾ ಕಾರ್ಯ ವನ್ನು ಅತ್ಯಂತ ಶ್ರದ್ಧಾಭಕ್ತಿಯಿಂದ ನೆರವೇರಿಸಿದರು. ನೂರಾರು ಭಕ್ತರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಸಾಮೂಹಿಕ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು.

# ಕುಡಿಯುವ ನೀರಿಗೆ ಸಮಸ್ಯೆಯಾಗದಂತೆ ಕ್ರಮ ವಹಿಸಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ತಾಲ್ಲೂಕಿನಾದ್ಯಂತ ಎಲ್ಲಿಯೂ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಅಧಿಕಾರಿಗಳು ಮುಂಜಾಗ್ರತೆ ವಹಿಸಬೇಕೆಂದು ಶಾಸಕ ಶಾಸಕ ಸಿ.ಎನ್.ಬಾಲಕೃಷ್ಣ ಅಧಿಕಾರಿಗಳಿಗೆ ಸೂಚನೆ ನೀಡಿದರು.



ಪಟ್ಟಣದ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಬೇಸಿಗೆ ಕುಡಿಯುವ ನೀರಿನ ಸಮಸ್ಯೆ ಕುರಿತು ಶುಕ್ರವಾರ ನಡೆದ ಟಾಸ್ಕ್ ಫೋರ್ಸ್ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಈಗಾಗಲೇ ಬೇಸಿಗೆ ಆರಂಭಗೊಂಡಿದ್ದು ಮುಂಬರುವ ದಿನಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಕಾಣಿಸಿಕೊಳ್ಳದಂತೆ ಪಟ್ಟಣ ಸೇರಿ ತಾಲ್ಲೂಕಿನ ಎಲ್ಲಾ ಗ್ರಾಮಗಳಲ್ಲಿ ಈಗಿನಿಂದಲೇ ಪರಿಶೀಲನೆ ನಡೆಸಿ ಬೋರವೆಲ್‌ಗಳ ದುರಸ್ತಿ, ಶುದ್ಧ ಕುಡಿಯುವ ನೀರಿನ ಘಟಕಗಳ ದುರಸ್ತಿ ಹಾಗೂ ಸಮಸ್ಯೆ ಉಂಟಾಗುವ ಸ್ಥಳಗಳಿಗೆ ಟ್ಯಾಂಕರ್ ಮೂಲಕವೂ ನೀರು ಸರಬರಾಜು ಮಾಡಲು ಕ್ರಮ ವಹಿಸುವಂತೆ ತಿಳಿಸಿದರು.

ಬೇಸಿಗೆಯಲ್ಲಿ ನೀರಿನ ಸಮಸ್ಯೆ ಆಗುವುದು ಸಾಮಾನ್ಯ. ಸಮಸ್ಯೆ ಗುರುತಿಸಿ ಪರಿಹಾರ ಕಲ್ಪಿಸುವುದು ಆಯಾ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಜವಾಬ್ದಾರಿ. ಗ್ರಾಮೀಣ ಕುಡಿಯುವ ನೀರು ಸರಬರಾಜು ವಿಭಾಗದ ಅಧಿಕಾರಿಗಳು ಈ ವಿಷಯದಲ್ಲಿ ಹೆಚ್ಚಿನ ಕಾಳಜಿ ವಹಿಸಬೇಕು. ಕುಡಿಯುವ ನೀರಿನ ವಿಷಯದಲ್ಲಿ ನಿರ್ಲಕ್ಷ್ಯ ತೋರಿದವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದೆಂದು ಎಚ್ಚರಿಸಿದ ಅವರು, ಮುಂಚಿತವಾಗಿಯೇ ಗಮನಿಸದೇ ನಂತರ ಏನಾದರೂ ಸಮಸ್ಯೆ ಕಂಡುಬಂದಲ್ಲಿ ಅದಕ್ಕೆ ಅಧಿಕಾರಿಗಳೆ ನೇರ ಹೊಣೆಯಾಗಲಿದ್ದೀರಿ. ಬೋರವೆಲ್ ರಿಫ್ರೆಶಿಂಗ್ ಮಾಡಿಸಿ, ಟ್ಯಾಂಕರ್ ದುರಸ್ತಿ ಅಥವಾ ಬೋರವೆಲ್‌ಗಳ ದುರಸ್ತಿ ಇದ್ದಲ್ಲಿ ಈಗಲೇ ಕ್ರಮ ಕೈಗೊಳ್ಳುವಂತೆ ತಿಳಿಸಿದರು.

ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಜಿ.ಆರ್. ಹರೀಶ್ ಮಾತನಾಡಿ, ಈಗಾಗಲೇ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಕುರಿತು ಎಲ್ಲಾ ರೀತಿಯ ಎಚ್ಚರಿಕೆ ವಹಿಸಲಾಗಿದೆ. ತಾಲ್ಲೂಕಿನಲ್ಲಿ 10 ಗ್ರಾಮಗಳಲ್ಲಿ ಸಮಸ್ಯೆಯಾಗಿದ್ದು ನೀರಿನ ಟ್ಯಾಂಕರ್ ಹಾಗೂ ರೈತರ ಜಮೀನಿನ ಖಾಸಗಿ ಬೋರವೆಲ್‌ಗಳಿಂದ ನೀರು ಸರಬರಾಜು ಮಾಡಲಾಗುತ್ತಿದೆ ಎಂದರು. ಶಿರಸ್ತೆದಾರ್ ಪವನ್, ತಾಲ್ಲೂಕು ಪಂಚಾಯಿತಿ ಸಹಾಯಕ ನಿರ್ದೇಶಕ ಗಿರೀಶ್, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ತ್ಯಾಗರಾಜ್, ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿ ಕೆ.ಎನ್. ಅನಿಲ್, ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಉಮಾಶಂಕರ್, ತಾಲೂಕಿನ ಎಲ್ಲಾ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಹಾಜರಿದ್ದರು.

## ಬೈಕ್ ಅಪಘಾತದಲ್ಲಿ ಪತಿ ಸಾವು- ಪತ್ನಿಗೆ ಗಾಯ

ಬೇಲೂರು: ನಿರ್ಲಕ್ಷ್ಯದ ಚಾಲನೆಯಿಂದ ಬೈಕ್ ಮೇಲಿಂದ ಬಿದ್ದು ಪತಿ ಮೃತಪಟ್ಟರೆ ಹಿಂಬದಿ ಕುಳಿತಿದ್ದ ಪತ್ನಿ ಗಂಭೀರ ಗಾಯಗೊಂಡಿರುವ ಘಟನೆ ತಾಲ್ಲೂಕಿನ ಸೂರನಾಯಕನಹಳ್ಳಿ ಗೇಟ್ ಸಮೀಪ ನಡೆದಿದೆ.

ಚಿಕ್ಕಮಗಳೂರು ತಾಲ್ಲೂಕು ದೇವರಹಳ್ಳಿ ಗ್ರಾಮದ ಯೋಗೇಶ್ ಪ್ರಸನ್ನ (37) ಮೃತರು. ಪತ್ನಿ ಜ್ಯೋತಿ ಅವರೊಂದಿಗೆ ಜಾವಗಲ್‌ನಿಂದ ಕೊಂಡ್ಲಿ ಗ್ರಾಮಕ್ಕೆ ಹೋಗುತ್ತಿದ್ದಾಗ ಸೂರನಾಯಕನಹಳ್ಳಿ ಗೇಟ್ ಬಳಿ ನಿಯಂತ್ರಣ ತಪ್ಪಿ ಬೈಕ್ ರಸ್ತೆ ಬದಿಯ ಗುಂಡಿಗೆ ನೆಗೆದಿದ್ದು ಇಬ್ಬರೂ ಕೆಳಗೆ ಬಿದ್ದಿದ್ದಾರೆ.

## ಕಾಚು ಮರದ ತುಂಡು ಸಂಗ್ರಹ: ದೂರು ದಾಖಲು



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹೊಳೆನರಸೀಪುರ: ಪಟ್ಟಣದ ಚಿಟ್ನನಹಳ್ಳಿ ವಸತಿ ಬಡಾವಣೆಯ ಕಿಂಗ್ಸ್ ಅಂಡ್ ಟ್ರೇಡರ್ಸ್‌ನಲ್ಲಿ ಅನುಮಾನಾಸ್ಪದವಾಗಿ ಶೇಖರಿಸಿಟ್ಟಿದ್ದ ಕೋಟ್ಯಾಂತರ ರೂ.ಬೆಲೆ ಬಾಳುವ ಸುಮಾರು 29 ಟನ್ ನಷ್ಟು ಕಾಚು ಮರದ ತುಂಡನ್ನು ಅರಣ್ಯ ಇಲಾಖೆಯ ಅಧಿಕಾರಿಗಳು ವಶಕ್ಕೆ ಪಡೆದು ದೂರು ದಾಖಲಿಸಿದ್ದಾರೆ.

ವಶಕ್ಕೆ ಪಡೆದ ಮರವನ್ನು ಇಲಾಖೆಯ ಸಂಗ್ರಹ ಸ್ಥಳಕ್ಕೆ ರವಾನಿಸಿ ತನಿಖೆ ಮುಂದುವರಿಸಲಾಗಿದೆ ಎಂದು ವಲಯ ಅರಣ್ಯಾಧಿಕಾರಿ ದಿಲೀಪ್ ಕುಮಾರ್ ತಿಳಿಸಿದ್ದಾರೆ.

ಹೊರ ರಾಜ್ಯಗಳಿಗೆ ಕಳುಹಿಸಲು ಬೀದರ್ ಜಿಲ್ಲೆಯಿಂದ ಮರದ ವ್ಯಾಪಾರಿಯೊಬ್ಬ ಅಪರೂಪದ ಕೋಟಿ ರೂ. ಬೆಲೆಬಾಳುವ ಮರದ ತುಂಡುಗಳನ್ನು ಶೇಖರಿಸಿಟ್ಟಿದ್ದರು. ಅರ್ಫದ್ ಹುಸೇನ್ ಎಂಬುವವರ ಪಟ್ಟಣದ ಕೈಗಾರಿಕಾ ವಲಯದ ಕಿಂಗ್ಸ್ ಅಂಡ್ ಟ್ರೇಡರ್ಸ್ ಗೋದಾಮಿನಲ್ಲಿ ಸಂಗ್ರಹಿಸಿಡಲಾಗಿತ್ತು. ಇದು ಔಷಧಿಯುಕ್ತ ಪದಾರ್ಥವಾಗಿದ್ದು, ಸಾಗಾಟಕ್ಕೆ ಪರವಾನಗಿ ಇರುವುದಿಲ್ಲ. ಕಗ್ಗಲಿ ಮರ ಸಾಗಾಟಕ್ಕೆ ಪರವಾನಗಿ ಪಡೆದಿದ್ದ ವ್ಯಕ್ತಿ ಕಾಚು ಮರ ಸಂಗ್ರಹಿಸಿದ್ದ ಎನ್ನಲಾಗಿದೆ.

## ಇತಿಹಾಸದಲ್ಲಿ ಈ ದಿನ

### ಏಪ್ರಿಲ್-05

1614: ಅಮೆರಿಕಾದ ಮೂಲ ನಿವಾಸಿ ಮಹಿಳೆ ಪೊಕಹಾಂಟಾಸ್ ಅವರು ಇಂಗ್ಲಿಷ್ ವಲಸಿಗ ಜಾನ್ ರೋಲ್ಫ್ ಅವರನ್ನು ವಿವಾಹವಾದರು.

1930: ಮಹಾತ್ಮ ಗಾಂಧಿ ಅವರ ದಂಡಿ ಉಪ್ಪು ಸತ್ಯಾಗ್ರಹ ತನ್ನ ತುದಿಗೆ ತಲುಪಿತು.

1955: ವಿನ್ಸ್ಟನ್ ಚರ್ಚಿಲ್ ಅವರು ಬ್ರಿಟನ್ ಪ್ರಧಾನ ಮಂತ್ರಿ ಸ್ಥಾನದಿಂದ ರಾಜೀನಾಮೆ ನೀಡಿದರು.

**ಜನನ**

1588: ಥಾಮಸ್ ಹಾಬ್ಸ್, ಪ್ರಸಿದ್ಧ ತತ್ವಜ್ಞಾನಿ

1908: ಬಾಬು ಜಗಜೀವನ್ ರಾಮ್, ಭಾರತೀಯ ರಾಜಕೀಯ ನಾಯಕ

**ಮರಣ**

1994: ಕುರ್ಟ್ ಕೋಬೈನ್, ಪ್ರಸಿದ್ಧ ಸಂಗೀತಗಾರ

# ನೂರಲ್ ಇರ್ಷಾದ್ ಅರಬಿ ಮದರಸ ವಿದ್ಯಾರ್ಥಿಗಳ ಸಾಧನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಇಸ್ಲಾಮಿಕ್ ಎಜುಕೇಶನ್ ಬೋರ್ಡ್ ವತಿಯಿಂದ 2025-26ನೇ ಸಾಲಿನಲ್ಲಿ ನಡೆಸಲಾದ ಅಖಿಲ ಭಾರತ ಮಟ್ಟದ ಅರಬಿ ಮದರಸ ಪಬ್ಲಿಕ್ ಪರೀಕ್ಷೆಯಲ್ಲಿ ಸಕಲೇಶಪುರದ ನೂರಲ್ ಇರ್ಷಾದ್ ಅರಬಿ ಮದರಸದ ವಿದ್ಯಾರ್ಥಿಗಳು ಜಿಲ್ಲಾ ಮಟ್ಟದಲ್ಲಿ ಅತ್ಯುತ್ತಮ ಶ್ರೇಣಿ ಪಡೆಯುವ ಮೂಲಕ ಸಂಸ್ಥೆಗೆ ಕೀರ್ತಿ ತಂದಿದ್ದಾರೆ.



ಏಳನೇ ತರಗತಿಯ ಪಬ್ಲಿಕ್ ಪರೀಕ್ಷೆಯಲ್ಲಿ ಮದರಸದ ವಿದ್ಯಾರ್ಥಿಗಳು ಜಿಲ್ಲೆಯ ಮೊದಲ ಮೂರು ಸ್ಥಾನಗಳನ್ನು ತಮ್ಮದಾಗಿಸಿಕೊಂಡಿದ್ದಾರೆ. ಮೊಹಮ್ಮದ್ ರಾಶಿ 600 ಅಂಕಗಳಿಗೆ 593 ಅಂಕ ಗಳಿಸಿ ಜಿಲ್ಲೆಗೆ ಪ್ರಥಮ ಸ್ಥಾನ ಗಳಿಸಿದರೆ, ಹಾಫಿಲಾ 583 ಅಂಕಗಳೊಂದಿಗೆ ದ್ವಿತೀಯ ಹಾಗೂ ಅರಿಫಾ 575 ಅಂಕಗಳನ್ನು ಪಡೆಯುವ ಮೂಲಕ ಜಿಲ್ಲೆಗೆ ತೃತೀಯ ಸ್ಥಾನ ಪಡೆದು ಸಾಧನೆ ಮಾಡಿದ್ದಾರೆ. ಐದನೇ ತರಗತಿಯ ಪರೀಕ್ಷೆಯಲ್ಲಿಯೂ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದು, ಆಯಿಷತ್ ಸಿಬ್ಲ 580 ಅಂಕಗಳೊಂದಿಗೆ ಜಿಲ್ಲೆಗೆ ದ್ವಿತೀಯ ಹಾಗೂ ಮೊಹಮ್ಮದ್ ಹರ್ಷ್ 576 ಅಂಕಗಳೊಂದಿಗೆ ಜಿಲ್ಲೆಗೆ ತೃತೀಯ ಸ್ಥಾನ ಗಳಿಸಿದ್ದಾರೆ.

ಕಳೆದ 52 ವರ್ಷಗಳಿಂದ ನಿರಂತರವಾಗಿ ಧಾರ್ಮಿಕ ಶೈಕ್ಷಣಿಕ ಸೇವೆ ನೀಡುತ್ತಿರುವ ಈ ಮದರಸವು ಪ್ರತಿ ವರ್ಷದ ಪಬ್ಲಿಕ್ ಪರೀಕ್ಷೆಯಲ್ಲಿ ಜಿಲ್ಲೆಯಲ್ಲೇ ಅತ್ಯುತ್ತಮ ಫಲಿತಾಂಶ ದಾಖಲಿಸುತ್ತಾ ಬಂದಿದೆ.

ವಿದ್ಯಾರ್ಥಿಗಳ ಈ ಶೈಕ್ಷಣಿಕ ಸಾಧನೆಯನ್ನು ಬದ್ರಿಯಾ ಜುಮಾ ಮಸೀದಿ ಆಡಳಿತ ಸಮಿತಿಯ ಅಧ್ಯಕ್ಷರಾದ ಯಾದ್ಗಾರ್ ಜಾಕೀರ್, ಕಾರ್ಯದರ್ಶಿ ಅಕ್ಬರ್ ಹಾಗೂ ಮದರಸದ ನಿರ್ಗಮಿತ ಮುಖ್ಯೋಪಾಧ್ಯಾಯ ರಫೀಕ್ ಮದನಿ ಅವರು ಅಭಿನಂದನೆ ಸಲ್ಲಿಸಿದ್ದಾರೆ.

## ಕರಕುಶಲ ತರಬೇತಿಯಿಂದ ಸ್ವಾವಲಂಬನೆ ಬದುಕು ಸಾಧ್ಯ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಕರಕುಶಲ ತರಬೇತಿ ಪಡೆಯುವುದರಿಂದ ಮಹಿಳೆಯರು ಸ್ವಾವಲಂಬನೆ ಬದುಕು ಕಟ್ಟಿಕೊಳ್ಳಲು ಸಾಧ್ಯವಾಗುತ್ತದೆ ಎಂದು ಜಿಲ್ಲಾ ಉದ್ಯೋಗಾಧಿಕಾರಿ ವಿಜಯಲಕ್ಷ್ಮಿ ಹೇಳಿದರು.

ತಾಲೂಕಿನ ದಿಡಗ ಗ್ರಾಮದಲ್ಲಿ ಕೌಶಲ ಕರ್ನಾಟಕ ಅಭಿವೃದ್ಧಿ ಯೋಜನೆ ಹಾಗೂ ಆಲೂರು ಹರ್ಷಿತ ಸಂಸ್ಥೆ ಸಹಯೋಗದಲ್ಲಿ 30 ನಿರುದ್ಯೋಗಿ ಅಭ್ಯರ್ಥಿಗಳಿಗೆ ಪಾರಂಪರಿಕ ಕೌಶಲ ತರಬೇತಿ ಹಾಗು ಹ್ಯಾಂಡ್ ಎಂಬ್ರಾಯಿಡರಿ ತರಬೇತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ಕರಕುಶಲ ಹಾಗೂ ಗುಡಿ ಕೈಗಾರಿಕೆ ತರಬೇತಿ ಪಡೆದಿರುವ ಮಹಿಳೆಯರು ಕುಟುಂಬದ ಆರ್ಥಿಕ ನಿರ್ವಹಣೆಯನ್ನು ಸದೃಢವಾಗಿಸಿಕೊಂಡಿದ್ದಾರೆ ಎಂದರು.

# ವ್ಯಕ್ತಿತ್ವ ವಿಕಸನಕ್ಕೆ ಕುಂಟು ನೆಪಗಳೇ ಮೊದಲ ಶತ್ರು

**- ಎನ್.ಆರ್.ಪ್ರಶಾಂತ್,**
**ಆಪ್ತಸಲಹಾ ಮನಃಶಾಸ್ತ್ರಜ್ಞರು ಮೊ.ನಂ. 9481545719**

ಕೆಲವೊಮ್ಮೆ ಯಾವುದಾದರು ಕೆಲಸ ಮಾಡಲಾಗದಿದ್ದಾಗ ನಮಗೆ ಏಕೆ ಮಾಡಲಾಗಲಿಲ್ಲವೆಂದು ಸಮರ್ಥಿಸಿಕೊಳ್ಳಲು ಕಾರಣಗಳನ್ನು ಕೊಡುತ್ತೇವೆ. ಅದರಲ್ಲಿ ಕಲವು ನಿಜವಾದ ಕಾರಣಗಳೆ ಆಗಿದ್ದರೂ ಬಹಳಸಾರಿ ನಿಜವಾದ ಕಾರಣಗಳ ಬದಲಿಗೆ ಏನೋ ಒಂದು ನೆಪ ಹೇಳಿ ನಮ್ಮ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತೇವೆ. ಇದು ಕ್ಷಣಿಕ ಮಾತ್ರ. ಇದರಿಂದ ಏನನ್ನೂ ಸಾಧಿಸಲಾಗುವುದಿಲ್ಲ. ಆ ಒಂದು ನಿರ್ದಿಷ್ಟ ಸಂದರ್ಭದಲ್ಲಿ ನಮ್ಮ ಮೇಲಿನ ಜವಾಬ್ದಾರಿಯಿಂದ ಜಾರಿಕೊಳ್ಳಲು ಮಾತ್ರ ಉಪಯೋಗವಾಗುತ್ತದೆ. ಆದರೆ ಕುಂಟು ನೆಪಗಳು ನಮ್ಮ ವ್ಯಕ್ತಿತ್ವ ವಿಕಾಸಕ್ಕೆ ಹಾಗು ವೈಯಕ್ತಿಕ ಬೆಳವಣಿಗೆಗೆ ಅಡ್ಡಿಯಾಗುತ್ತವೆ.

1. ನನ್ ಕೈಲಾಗಲ್ಲ: ಕೆಲವೊಮ್ಮೆ ಪ್ರಯತ್ನವನ್ನೇ ಮಾಡದೆ ಇದಾಗುವುದಿಲ್ಲ, ಅದಾಗುವುದಿಲ್ಲ ಎಂದು ಹೇಳುವುದನ್ನು ಕೇಳಿದ್ದೇವೆ. ಈ ರೀತಿ ಹೇಳುವುದರಿಂದ ಹಿಂದೆಂದೂ ಯಾರೂ ಮಾಡಿರದ ಸಾಧನೆಯನ್ನು ನಾವು ಮಾಡುವ ಅವಕಾಶವನ್ನು ಕಳೆದುಕೊಳ್ಳುವುದು ಸತ್ಯ. ಪ್ರಯತ್ನಿಸಿ ಸೋತರೆ ತಪ್ಪಲ್ಲ ಆದರೆ ಪ್ರಯತ್ನವನ್ನೇ ಮಾಡದಿರುವುದು ದೊಡ್ಡತಪ್ಪು.

2. ನಾನ್ ಜಾಸ್ತಿ ಓದಿಲ್ಲ, ಅದಕ್ಕೆ ನನಗೆ ಬೆಲೆಯಿಲ್ಲ: ಓದು ಜೀವನಕ್ಕೆ ಬಹಳ ಮುಖ್ಯ ಎನ್ನುವುದು ಸತ್ಯ. ಆದರೆ ಹೆಚ್ಚು ಓದಿಲ್ಲದ ಕಾರಣ ಏನನ್ನೂ ಸಾಧಿಸಲಿಕ್ಕಾಗುವುದಿಲ್ಲ ಅನ್ನುವುದು ಸುಳ್ಳು. ಸಮಾಜದಲ್ಲಿ ಹೆಚ್ಚು ಓದಿಲ್ಲದಿರುವವರು ಸಾಧಿಸುವಂತಹದ್ದು ಬಹಳ ಇದೆ. ಹಾಗೆ ನೋಡಿದರೆ ಹೆಚ್ಚಾಗಿ ಓದದೆಯಿರುವವರು ದೊಡ್ಡ ದೊಡ್ಡ ಸಾಧನೆಗಳನ್ನು ಮಾಡಿರುವ ಅನೇಕ ಉದಾಹರಣೆಗಳಿವೆ.

3. ನಾನ್ ಯಾವುದಕ್ಕೂ ಪ್ರಯೋಜನವಿಲ್ಲ: ಬಹಳ ಜನರು ಈ ರೀತಿ ಯೋಚಿಸಿಯಾವುದಕ್ಕೂ ಮುಂದುವರೆಯುವುದಿಲ್ಲ, ಏನೂ ಮಾಡುವುದಿಲ್ಲ. ಕೆಲವರು ತಮ್ಮ ಅಂಗವಿಕಲತೆಯಿಂದ ಅಥವಾ ಯಾವುದೇ ದೈಹಿಕ ನ್ಯೂನ್ಯತೆಯಿಂದ ತಾವು ಯಾವುದಕ್ಕೂ ಪ್ರಯೋಜನವಿಲ್ಲ ಎಂದು ಯೋಚಿಸಿರಬಹುದು. ಆದರೆ ದೈಹಿಕವಾಗಿ ಮಾನಸಿಕವಾಗಿ ಆರೋಗ್ಯವಾಗಿರುವಂತಹವರು ಈ ರೀತಿ ಹೇಳಿದರೆ,



ಅದು ಒಂದು ನೆಪ ಮಾತ್ರ. ಹುಟ್ಟುತ್ತಲೆ ಯಾರೂ ಯಾವುದರಲ್ಲೂ ಪರಿಣಿತಿ ಪಡೆದಿರುವುದಿಲ್ಲ. ಬೆಳೆಯುತ್ತಾ, ಕಲಿಯುತ್ತೇವೆ. ಒಂದು ವೇಳೆ ಸಮಾಜ ನಿಮ್ಮನ್ನು ಕೈಲಾಗದವರು ಎಂದು ಅಂದುಕೊಂಡಿದ್ದರೆ ಅದು ಒಳ್ಳೆಯದೆ, ಏಕೆಂದರೆ ನಿಮ್ಮಿಂದ ಜನರ ನಿರೀಕ್ಷೆ ಕಡಿಮೆಯಿರುತ್ತದೆ. ಆಗ ನೀವಿಡುವ ಪ್ರತಿಯೊಂದು ಚಿಕ್ಕಚಿಕ್ಕ ಹೆಜ್ಜೆ ಕೂಡ ಜನರ ಪಾಲಿಗೆ ದೊಡ್ಡದೆ ಆಗಿರುತ್ತದೆ.

4. ನನ್ನತ್ರ ದುಡ್ಡಿಲ್ಲ, ಅದಕ್ಕೆ ಏನೂ ಮಾಡಕ್ಕಾಗ್ತಾಯಿಲ್ಲ: ಎಷ್ಟು ವರ್ಷಗಳ ತನಕ ಹೀಗೆ ನೆಪ ಹೇಳಿಕೊಂಡು ಇರುವುದಕ್ಕಾಗುತ್ತದೆ ಹೇಳಿ? ಸಮಾಜದಲ್ಲಿ ಆರ್ಥಿಕವಾಗಿ ಹಿಂದುಳಿದವರು ಬಹಳ ಜನರಿದ್ದಾರೆ. ಆದರೆ ಅವರೆಲ್ಲರೂ ಹೀಗೆ ಹೇಳಿಕೊಂಡು ಕುಳಿತಿರುವುದಿಲ್ಲ. ಏನಾದರೂ ಸಣ ಪುಟ್ಟ ಕೆಲಸಗಳನ್ನು ಮಾಡಿಕೊಂಡು ಜೀವನದಲ್ಲಿ ಸಾಧನೆಗೆ ಅಥವಾ ಯಶಸ್ಸಿಗೆ ಬೇಕಾದ ಹಣವನ್ನು ಕೂಡಿಸಿಕೊಳ್ಳುತ್ತಾರೆ.

5. ನೋಡಿದವರು ಏನನ್ಕೊತಾರೋ: ಯಾರಾದರೂ ತಮ್ಮ ಜೀವನದಲ್ಲಿ ಏನಾದರು ಸಾಧಿಸಬೇಕೆಂದಿದ್ದರೆ ಮೊದಲು ಅವರಿವರು ಏನಂದುಕೊಳ್ಳುತ್ತಾರೆಯೋ ಎಂಬ ನೆಪವನ್ನು ತಲೆಯಿಂದ ತೆಗೆದು ಹಾಕಬೇಕು. ಇದನ್ನೆ ನೆಪ ಮಾಡಿಕೊಂಡರೆ ಏನನ್ನೂ ಸಾಧಿಸಲಾಗುವುದಿಲ್ಲ. ಯಾರೂ ಏನೂ ಅಂದುಕೊಳ್ಳುವುದಿಲ್ಲ. ಅದೂ ಅಲ್ಲದೆ ನಿಮ್ಮ ಜೀವನದಲ್ಲಿ ಏನು ನಡೆಯುತ್ತಿದೆ ಎಂದು ತಿಳಿದುಕೊಳ್ಳುವಷ್ಟು ಸಮಯ ಯಾರಿಗೂ ಇರುವುದಿಲ್ಲ, ಎಲ್ಲರೂ ಅವರವರ ಕೆಲಸದಲ್ಲಿ ಮಗ್ನರಾಗಿರುತ್ತಾರೆ. ಅಷ್ಟಕ್ಕೂ ಯಾರಾದರೂ ಏನಾದರೂ ಅಂದುಕೊಂಡರೂ ಅದು ಕೆಲಸಮಯ ಮಾತ್ರ. ನೀವು ಏನಾದರು ಸಾಧನೆ ಮಾಡಿದಾಗ ಎಲ್ಲವೂ ಮರೆತು ಹೋಗುತ್ತದೆ.

6. ನನ್ ಹಣೆಬರಹ ಸರಿಯಿಲ್ಲ: ಪೂರ್ವ ಸಿದ್ಧತೆ ಹಾಗು ಅವಕಾಶ ಇವೆರಡೂ ಸೇರಿ ಅದೃಷ್ಟವೆನಿಸಿಕೊಳ್ಳುತ್ತದೆ. ಏನನ್ನಾದರೂ ಸಾಧಿಸಬೇಕೆಂದಿದ್ದರೆ ಮೊದಲು ಪೂರ್ವಸಿದ್ಧತೆ ಮಾಡಿಕೊಳ್ಳಬೇಕು. ಅವಕಾಶಕ್ಕಾಗಿ ಹುಡುಕಾಟ ನಡೆಸುತ್ತಿರಬೇಕು. ಈ ಎರಡೂ ಅಂಶಗಳು ಹೊಂದಾಣಿಕೆಯಾದಾಗಲೆ ಹಣೆಬರಹ ಸರಿಹೋಗುತ್ತದೆ. ಅದೃಷ್ಟವಿದ್ದರೆ ಎಲ್ಲವೂ ಸರಿಹೋಗುತ್ತದೆ ಎನ್ನುವುದಕ್ಕೆ ಯಶಸ್ಸು ಎನ್ನುವುದು ಜೂಜಾಟವಲ್ಲ.

ಒಮ್ಮೆ ಶಿಷ್ಯನೊಬ್ಬ ಚಾಣಕ್ಯನನ್ನು ಕೇಳಿದನಂತೆ, ಎಲ್ಲವೂ ಹಣೆಬರಹದಂತೆ ನಡೆಯುವುದಾದರೆ ನಾವೇಕೆ ಪ್ರಯತ್ನಪಡಬೇಕು ಎಂದು, ಆಗ ಚಾಣಕ್ಯ ಉತ್ತರಿಸಿದನಂತೆ, ಯಾರಿಗೆ ಗೊತ್ತು ಹಣೆಬರಹದಲ್ಲಿ ಪ್ರಯತ್ನಪಟ್ಟರೆ ಫಲಸಿಗುವುದೆಂದು ಬರೆದಿರಬಹುದು ಅಲ್ಲವೆ ಯೋಚಿಸಿ ನೋಡಿ.

7. ನಾನಿರೋದೆ ಹೀಗೆ ನನ್ನ ನಾನು ಬದಲಾಯಿಸಿಕೊಳ್ಳಕ್ಕಾಗಲ್ಲ: ಏಕೆ ಆಗುವುದಿಲ್ಲ? ಬದಲಾವಣೆ ಜಗದ ನಿಯಮ. ಹುಟ್ಟಿನಿಂದ ಸಾವಿನವರೆಗೂ ನಾವು ಬದಲಾಗುತ್ತಲೆ ಇರುತ್ತೇವೆ. ಕಾಲಕ್ಕೆ ತಕ್ಕಂತೆ ಬದಲಾಗದಿರುವವರನ್ನು ಜನರು ಮೂರ್ಖರೆಂದು ಪರಿಗಣಿಸುತ್ತಾರೆ. ನೆನಪಿರಲಿ.

8. ನಂಗ್ ವಯಸ್ಸಾಯ್ತು, ಇನ್ನೇನ್ ಸಾಧನೆ ಮಾಡ್ಲಿ: ಅನೇಕರು ತಮ್ಮ ವೃದ್ಧಾಪ್ಯದಲ್ಲಿಯೇ ದೊಡ್ಡ ದೊಡ್ಡ ಸಾಧನೆ ಮಾಡಿ ಜೀವನದಲ್ಲಿ ಯಶಸ್ಸು ಗಳಿಸಿರುವುದು. ಕರ್ನಲ್ ಸ್ಯಾಂಡರ್ಸ್ ತಮ್ಮ 62ನೆ ವಯಸ್ಸಿನಲ್ಲಿ ಕೆ.ಎಫ್.ಸಿ ಎಂಬ ಬ್ರಾಂಡ್ ಶುರುಮಾಡಿದ್ದು.

9. ಸಿಕ್ಕಾಪಟ್ಟೆ ಬಿಜಿ..ಟೈಮಿಲ್ಲ: ತಾನು ತುಂಬಾ ಬಿಜಿ ಎನ್ನುವುದು ನೆಪ ಮಾತ್ರ. ಟೈಂ ಇಲ್ಲ ಎನ್ನುವುದು ಬಹಳ ದೊಡ್ಡ ಒಂದು ಕುಂಟು ನೆಪ. ಜೀವನದಲ್ಲಿ ನಿಜವಾಗಿಯೂ ಯಾವುದು ಮುಖ್ಯವಾಗಿರುತ್ತದೆಯೋ ಅದಕ್ಕೆ ಮಾತ್ರ ಬಿಡುವು ಮಾಡಿಕೊಂಡರೆ ಮಿಕ್ಕೆಲ್ಲಕ್ಕೂ ತಾನಾಗಿಯೇ ಸಮಯ ಸಿಗುತ್ತದೆ. ಸಾಧನೆಯೆ ಮುಖ್ಯವೆನಿಸಿದಾಗ ಖಂಡಿತವಾಗಿಯೂ ಅದಕ್ಕಾಗಿ ಸಮಯ ಮಾಡಿಕೊಳ್ಳುವ ಮನೋಭಾವ ಬೆಳೆಯುತ್ತದೆ. ಸಾಧಿಸುವ ಛಲವಿದ್ದಾಗ ಸಮಯವಿಲ್ಲವೆನ್ನುವಂತಹ ನೆಪಕ್ಕಿಂತ ಇರುವ ಸಮಯವನ್ನು ಸಮರ್ಪಕವಾಗಿ ಬಳಸಿಕೊಳ್ಳುವುದು ಸೂಕ್ತ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248